# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಬುಧವಾರ, ಮಾರ್ಚ್ 01, 2023

ಸಂಪುಟ : 49 ಸಂಚಿಕೆ : 288 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 5.00 www.janathavani.com janathavani@mac.com






ಜನ್ಮ ದಿನದ ಶುಭಾಶಯಗಳು

ನಗರಸಭೆ ಮಾಜಿ ಅಧ್ಯಕ್ಷರು, ಮಹಾನಗರ ಪಾಲಿಕೆ ಮಾಜಿ ಸದಸ್ಯರೂ,
ಯುವಕರ ಕಣ್ಮಣಿ, ಅಭಿವೃದ್ಧಿಯ ಹರಿಕಾರ, ಸರಳ ಸಜ್ಜನಿಕೆಯ ಸಾಕಾರ ಮೂರ್ತಿ

ಶ್ರೀ ಶಿವನಳ್ಳಿ ರಮೇಶ್

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು. ಭಗವಂತನು ಅವರಿಗೆ
ಆಯುರಾರೋಗ್ಯ-ಐಶ್ವರ್ಯ-ಸುಖ-ಶಾಂತಿ-ನೆಮ್ಮದಿ ನೀಡಲೆಂದು ಎಂದು ಪ್ರಾರ್ಥಿಸುತ್ತಾ,
ಶ್ರೀಯುತರಿಗೆ ಇನ್ನೂ ಉನ್ನತ ಸ್ಥಾನಮಾನಗಳು ಲಭಿಸಲಿ ಎಂದು ಆಶಿಸುತ್ತೇವೆ.




ಶ್ರೀನಿವಾಸ ಶಿವಗಂಗಾ
ರಾಜ್ಯ ಉಪಾಧ್ಯಕ್ಷರು
ಅ.ಭಾ.ವೀ. ಮಹಾಸಭಾ ಯುವ ಘಟಕ

ಬಸವರಾಜು ಶಿವಗಂಗಾ
ಜಿಲ್ಲಾ ಅಧ್ಯಕ್ಷರು
ಕಿಸಾನ್ ಕಾಂಗ್ರೆಸ್, ದಾವಣಗೆರೆ.

ಆರ್. ಹೆಚ್. ನಾಗಭೂಷಣ್
ಮಾಜಿ ಅಧ್ಯಕ್ಷರು
ನಗರಸಭೆ, ದಾವಣಗೆರೆ

ರಾಜು ರೆಡ್ಡಿ
ಪ್ರಥಮ ದರ್ಜೆ
ಗುತ್ತಿಗೆದಾರರು

ಜಯಪ್ರಕಾಶ್ ಗೌಡ
ಅಧ್ಯಕ್ಷರು, ದಾವಣಗೆರೆ
ಇಲೆವೆನ್ಸ್ ಕ್ರಿಕೆಟ್ ಕ್ಲಬ್

✦ ಶಿವಗಂಗಾ ಗ್ರೂಪ್ಸ್ ✦ ಸ್ಟೇಡಿಯಂ ಫ್ರೆಂಡ್ಸ್ ✦ ಎಸ್.ಎಸ್.ಜಿ. ಕನ್‌ಸ್ಟ್ರಕ್ಷನ್ಸ್
✦ ಎಸ್.ಎಸ್.ಜಿ. ಟ್ರಾನ್ಸ್‌ಪೋರ್ಟ್ ✦ ಶಿವ ಎಂಟರ್‌ಪ್ರೈಸಸ್ ✦ ಶಿವ ಆರ್‌ಎಂಸಿ ಸರ್ವೀಸಸ್





ಶ್ರೀ ಶಾಮನೂರು ಆಂಜನೇಯ ಸ್ವಾಮಿ ರಥೋತ್ಸವಕ್ಕೆ
ಆಗಮಿಸುವ ಸರ್ವ ಭಕ್ತಾದಿಗಳಿಗೆ ಸ್ವಾಗತ... ಸುಸ್ವಾಗತ...



ಜಿ.ಹೆಚ್. ಲಿಂಗರಾಜ್
ಶಾಮನೂರು

ಜಿ.ಬಿ. ಸುರೇಶ್
ಶಾಮನೂರು

✦ ಕೆ.ಆರ್. ವೇದಮೂರ್ತಿ
✦ ಜಿ.ಎಲ್. ಶ್ರೀಧರ್
✦ ಜಿ.ಎಸ್. ಭರತ್
✦ ಜಿ.ಎಸ್. ರಿತೇಶ್




ಶಾಮನೂರು
ಜಿ.ಹೆಚ್. ರಾಮಚಂದ್ರಪ್ಪ
ಮಾಜಿ ಅಧ್ಯಕ್ಷರು
ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ

ಮೆ|| ಮಹಾನಂದಿ ಪೆಟ್ರೋಲ್ ಬಂಕ್
ಶಾಮನೂರು ರೋಡ್, ದಾವಣಗೆರೆ. ಫೋನ್ : 222174, ಮೊಬೈಲ್ : 94484-07869



ಶ್ಯಾಬನೂರಿನಲ್ಲಿ ಇಂದು
ಆಂಜನೇಯಸ್ವಾಮಿ ರಥೋತ್ಸವ



ದಿನಾಂಕ 1.3.2023 ರ ಬುಧವಾರ ರಥೋತ್ಸವ
ದಿನಾಂಕ 2.3.2023 ರ ಗುರುವಾರ ಬೆಲ್ಲದ ಬಂಡಿ
ದಿನಾಂಕ 3.3.2023 ರ ಶುಕ್ರವಾರ ಓಕುಳಿ

ಸರ್ವ ಭಕ್ತಾದಿಗಳಿಗೆ ಆದರದ ಸುಸ್ವಾಗತ

ಶ್ರೀ ಆಂಜನೇಯ ಸ್ವಾಮಿ
ದೇವಸ್ಥಾನ ಕಮಿಟಿ, ಶ್ಯಾಬನೂರು.



"THE BEST PREPARATION FOR TOMORROW
IS DOING YOUR BEST TODAY"

ALL THE BEST
for 10th-AISSE (CBSE)-2023

"ಸೂರ್ಯನಂತೆ ಹೊಳೆಯುವ ಆಸೆ ನಿಮಗಿದ್ದರೆ, ಮೊದಲು
ಸೂರ್ಯನಂತೆ ಹೊತ್ತಿ ಉರಿಯುವುದನ್ನು ಕಲಿಯಿರಿ"



Best wishes
Smt. SHASHIKALA E.R
President

YOGI RAM
SHASHI EDUCATIONAL TRUST ®
LALITHA PRE UNIVERSITY COLLEGE
LALITHA INTERNATIONAL PUBLIC SCHOOL


## ಮಾತು ಮಾಣಿಕ್ಯ

ನೀವು ಹೋಗತ್ತಿರುವ ದಾರಿಯಲ್ಲಿ ಯಾವುದೇ ಅಡಚಣೆಗಳು ಎದುರಾಗದಿದ್ದಲ್ಲಿ ನೀವು ಸರಿಯಾದ ದಾರಿಯಲ್ಲಿ ಹೋಗುತ್ತಿಲ್ಲ ಎಂದರ್ಥ.

- ಸ್ವಾಮಿ ವಿವೇಕಾನಂದ

Davanagere Weather 35⁰ 20⁰


ಜನ್ಮದಿನದ ಶುಭಾಶಯಗಳು



ನಗರಸಭೆ ಮಾಜಿ ಅಧ್ಯಕ್ಷರು, ಮಹಾನಗರ ಪಾಲಿಕೆ ಮಾಜಿ ಸದಸ್ಯರೂ,
ಯುವಕರ ಕಣ್ಮಣಿ, ಅಭಿವೃದ್ಧಿಯ ಹರಿಕಾರ, ಸರಳ ಸಜ್ಜನಿಕೆಯ ಸಾಕಾರ ಮೂರ್ತಿ

ಶ್ರೀ ಶಿವನಳ್ಳಿ ರಮೇಶ್

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು. ಭಗವಂತನು ಅವರಿಗೆ
ಆಯುರಾರೋಗ್ಯ-ಐಶ್ವರ್ಯ-ಸುಖ-ಶಾಂತಿ-ನೆಮ್ಮದಿ ನೀಡಲೆಂದು ಎಂದು ಪ್ರಾರ್ಥಿಸುತ್ತಾ,
ಶ್ರೀಯುತರಿಗೆ ಇನ್ನೂ ಉನ್ನತ ಸ್ಥಾನಮಾನಗಳು ಲಭಿಸಲಿ ಎಂದು ಆಶಿಸುತ್ತೇವೆ.

ಶಿವನಳ್ಳಿ ರಮೇಶ್ ಅಭಿಮಾನಿಗಳ ಬಳಗ




ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ

|| ಶ್ರೀ ಗಣೇಶಾಯ ನಮಃ || || ಶ್ರೀ ಕುಲದೇವತಾ ಪ್ರಸನ್ನ ||

ಶ್ರೀ ವಿನಾಯಕ ಪಾಂಡುರಂಗ ವೆರ್ಣೇಕರ್, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 16-02-2023 ನೇ ಗುರುವಾರ ರಾತ್ರಿ 08-15 ಕ್ಕೆ ನನ್ನ ತಮ್ಮನವರಾದ



ಜನನ :
26-11-1956

ನಿಧನ :
16-02-2023

ಶ್ರೀ ಅಶೋಕ್ ಪಾಂಡುರಂಗ ವೆರ್ಣೇಕರ್
ಇವರು ಸ್ವರ್ಗಸ್ಥರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ವೈಕುಂಠ ಸಮಾರಾಧನೆಯನ್ನು
ದಿನಾಂಕ 01-03-2023ನೇ ಬುಧವಾರ ಮಧ್ಯಾಹ್ನ 12-30 ಕ್ಕೆ
'ದೈವಜ್ಞ ಕಲ್ಯಾಣ ಮಂಟಪ' ಪಿ.ಬಿ. ರಸ್ತೆ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು
ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು

ಪತ್ನಿ, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು,
ಮೆ|| ಪಾಂಡುರಂಗ ಬೊಮ್ಮಯ್ಯ ವೆರ್ಣೇಕರ್
ಕುಟುಂಬ ವರ್ಗದವರು ಮತ್ತು ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

# ಹಾರಕನಾಳು ಗ್ರಾ.ಪಂ. ಚುನಾವಣೆ ಫಲಿತಾಂಶ : ಕಾದು ಸುಸ್ತಾದ ಅಭ್ಯರ್ಥಿಗಳು



ಹರಪನಹಳ್ಳಿ, ಫೆ.28- ತಾಲ್ಲೂಕಿನ ಹಾರಕನಾಳು ಗ್ರಾಮ ಪಂಚಾಯ್ತಿ ಚುನಾವಣೆ ಫಲಿತಾಂಶಕ್ಕಾಗಿ ಬೆಳಿಗ್ಗೆಯಿಂದ ತಹಶೀಲ್ದಾರರ ಕಚೇರಿ ಬಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಭ್ಯರ್ಥಿಗಳು ಕಾದು ಕುಳಿತ್ತಿದ್ದರು. ಸಂಜೆಯವರೆಗೂ ಮತ ಎಣಿಕೆ ಕಾರ್ಯ ಜರುಗಿತು.

ಪಟ್ಟಣದ ತಾಲ್ಲೂಕು ಮಿನಿ ವಿಧಾನಸೌಧದ ಸಭಾಂಗಣದಲ್ಲಿ ಮಂಗಳವಾರ ಮತ ಎಣಿಕೆ ಕಾರ್ಯ ನಡೆದಿದ್ದು, ಒಟ್ಟು ಮೂರು ಕೊಠಡಿಗಳಲ್ಲಿ ಮತ ಎಣಿಕೆಯನ್ನು ಮಾಡಲಾಯಿತು.

ಚುನಾವಣೆಗೂ ಮುನ್ನ ಹಾರಕನಾಳು ಗ್ರಾಮದ 3 ಸ್ಥಾನಗಳ ಪೈಕಿ 1 ಸ್ಥಾನವಾದ ಪ.ಜಾತಿ(ಮ) ವರ್ಗದಿಂದ ದುರ್ಗಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದರು. ಇನ್ನು ಉಳಿದಂತೆ 21 ಸ್ಥಾನಗಳಿಗೆ ಫೆ.25ರಂದು ಚುನಾವಣೆ ನಡೆದಿದ್ದು, ಇಂದು ಮತ ಎಣಿಕೆ ಕಾರ್ಯ ಜರುಗಿತು.

ಆರಂಭದಲ್ಲಿ ಈಶಾಪುರ ಗ್ರಾಮದ 1 ಸ್ಥಾನಕ್ಕೆ ಮತ ಎಣಿಕೆ ನಡೆದಿದ್ದು, ಪೂಜಾರ ಮಂಜುನಾಥ 5 ಮತಗಳ ಅಂತರದಿಂದ ಗೆದ್ದು ನಗೆ ಬೀರಿದರು. ಹಾರಕನಾಳು ಕ್ಷೇತ್ರದ 1 ರಲ್ಲಿ ಬಸವರಾಜಪ್ಪ ಹೊನ್ನಪ್ಪ 280 ಮತ ಪಡೆದು ಜಯ ಗಳಿಸಿದರೆ, ರೇಣುಕವ್ವ ಹಾಗೂ ಬಡಿಗೇರ ರತ್ನಮ್ಮ ಇವರು 262 ಸಮ ಮತಗಳನ್ನು ಪಡೆದಿದ್ದು, ಚುನಾವಣಾಧಿಕಾರಿಗಳು ಅಂತಿಮವಾಗಿ ಲಾಟರಿ ಮೂಲಕ ಬಡಿಗೇರ ರತ್ನಮ್ಮ ಆಯ್ಕೆಯಾಗಿದ್ದಾರೆ ಎಂದು ಘೋಷಣೆ ಮಾಡಿದರು.

ಹಾರಕನಾಳು ಕ್ಷೇತ್ರ 2ರಲ್ಲಿ ಮೂರು ಸ್ಥಾನಗಳಿಗೆ ಮೀಸಲಿದ್ದು, ಇದರಲ್ಲಿ ಸಾಮಾನ್ಯ ಮಹಿಳೆ ಶಾಂತಮ್ಮ ಕರಿಯಪ್ಪ ಹಾವನೂರು 318, ಸಾಮಾನ್ಯದಲ್ಲಿ ಮಹಾಂತೇಶ್ 343 ವಿಜಯ ಸಾಧಿಸಿದರೆ, ಪ.ಜಾತಿ ಮಹಿಳೆ ಕೆ. ದುರುಗಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕನ್ನನಾಯಕನಹಳ್ಳಿ ಗ್ರಾಮದಲ್ಲಿ 2 ಸ್ಥಾನಗಳ ಪೈಕಿ ಪ.ಜಾತಿ ಮಹಿಳಾ ಸ್ಥಾನದ ಅಭ್ಯರ್ಥಿ ಭಾಗ್ಯ ಅಶೋಕ ಅವಿರೋಧವಾಗಿ ಆಯ್ಕೆಯಾಗಿದ್ದರು. ಉಳಿದ ಸ್ಥಾನಕ್ಕೆ ನಡೆದ ಮತ ಎಣಿಕೆಯಲ್ಲಿ ದುಗ್ಯನಾಯ್ಕ 319 ಮತ ಪಡೆದು ಜಯ ಸಾಧಿಸಿದ್ದಾರೆ.

ಹುಲಿಕಟ್ಟೆಯ ಮೂರು ಸ್ಥಾನಗಳಿಗೆ 11 ಜನ ಅಭ್ಯರ್ಥಿಗಳು ಸ್ಪರ್ಧಿಸಿದ್ದು, ಇದರಲ್ಲಿ ಪ.ಜಾತಿ ವರ್ಗದಲ್ಲಿ ಅಕ್ಷತಾರವರು 316 ಮತ ಪಡೆದಿದ್ದರೆ, ಸಾಮಾನ್ಯ ಮಹಿಳಾ ವರ್ಗದಲ್ಲಿ ಬಿ.ಬಿ.ಫಾತಿಮಾ 467 ಮತ ಪಡೆದು ಜಯ ಸಾಧಿಸಿದರೆ, ಮತ್ತೊಂದು ಸಾಮಾನ್ಯ ಮಹಿಳಾ ವರ್ಗದಲ್ಲಿ ರಾಭಿಯಾಭೀ 417 ಮತಗಳನ್ನು ಪಡೆದು ವಿಜಯಶಾಲಿಯಗಿದ್ದಾರೆ.

ಚನ್ನಹಳ್ಳಿ ಗ್ರಾಮದಲ್ಲಿ 4 ಸ್ಥಾನಗಳಿಗೆ 9ಜನ ಅಭ್ಯರ್ಥಿಗಳು ಸ್ಪರ್ಧಿಸಿದ್ದು, ಇದರಲ್ಲಿ ಎಸ್‌ಸಿ ಮಹಿಳೆ ಧನಿಬಾಯಿ 834 ಮತ ಪಡೆದಿದ್ದಾರೆ. ಎಸ್.ಸಿ.ಮಹಿಳೆ ಸಿ.ದೇವಿ ಬಾಯಿ 560 ಮತಗಳು, ಎಸ್‌ಸಿ ಸಾಮಾನ್ಯ ಪಿ.ಶಿವನಾಯ್ಕ 700 ಮತಗಳು ಹಾಗೂ ಎಸ್.ಸಿ.ಸಾಮಾನ್ಯ ಶಾರದಬಾಯಿಯವರಿಗೆ 488 ಮತಗಳನ್ನು ಪಡೆಯುವ ಮೂಲಕ ಗೆಲುವು ಸಾಧಿಸಿದ್ದಾರೆ.

ಹುಲಿಕಟ್ಟೆ-1 ಹಾಗೂ ಮೇಗಳತಾಂಡ ಗ್ರಾಮದ ಮತ ಎಣಿಕೆ ಕಾರ್ಯ ಸಂಜೆಯವರೆಗೂ ಮುಂದುವರೆದಿತ್ತು.

ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್, ಎಣಿಕೆ ಕೊಠಡಿಗೆ ಬೇಟಿ ನೀಡಿದ್ದರು. ತಹಶೀಲ್ದಾರ್ ಶಿವಕುಮಾರ ಬಿರಾದಾರ, ಚುನಾವಣಾಧಿಕಾರಿಗಳಾದ ರವಿಕುಮಾರ್, ಅರವಿಂದ್, ಪಿಎಸ್‌ಐ ಶಾಂತಮೂರ್ತಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಮತ ಎಣಿಕೆ ಕಾರ್ಯದಲ್ಲಿ ತೊಡಗಿದ್ದರು.

# ಮಲೇಬೆನ್ನೂರಿನಲ್ಲಿ ಉರುಸ್ : ಸೌಹಾರ್ದತೆ ಕಾಪಾಡಲು ಸಭೆಯಲ್ಲಿ ಸಿಪಿಐ ಗೌಡಪ್ಪ ಮನವಿ



ಮಲೇಬೆನ್ನೂರು, ಫೆ. 28 - ಸರ್ಕಾರ ರೂಪಿಸಿರುವ ಕಾನೂನು ನಿಯಮ ಪಾಲಿಸಿ ಸೌಹಾರ್ದತೆಯಿಂದ ಉರುಸ್ ಆಚರಣೆ ಮಾಡಬೇಕು, ಶಾಂತಿ ಕದಡಿದರೆ ಶಿಸ್ತು ಕ್ರಮ ಅನಿವಾರ್ಯ ಎಂದು ಹರಿಹರ ಸಿಪಿಐ ಗೌಡಪ್ಪ ಗೌಡ ಖಡಕ್ಕಾಗಿ ಎಚ್ಚರಿಕೆ ನೀಡಿದರು.

ಪಟ್ಟಣದಲ್ಲಿ ಮಾ.1 ರ ಬುಧವಾರ ಮತ್ತು 2 ರ ಗುರುವಾರ ಜರುಗಲಿರುವ ಪ್ರಸಿದ್ಧ ಹಜರತ್ ಸೈಯದ್ ಹಬೀಬುಲ್ಲಾ ಷಾ ಖಾದ್ರಿ ಅವರ ಉರುಸ್ ಪ್ರಯುಕ್ತ ಸೋಮವಾರ ಸಂಜೆ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಕರೆದಿದ್ದ ಸೌಹಾರ್ದ ಶಾಂತಿ ಸಭೆ ಉದ್ದೇಶಿಸಿ ಅವರು ಮಾತನಾಡಿದರು.

ನಿಗದಿತ ಸಮಯ, ಮಾರ್ಗದಲ್ಲಿ ಮೆರವಣಿಗೆ ಮಾಡಿ, ಡಿಜೆ ಬಳಸುವಂತಿಲ್ಲ. ಆಯೋಜಕರು ವಾಹನ ಪಾರ್ಕಿಂಗ್ ವ್ಯವಸ್ಥೆಯನ್ನು ವಿದ್ಯುತ್ ದೀಪಗಳೊಂದಿಗೆ ಮಾಡಬೇಕು. ಖವ್ವಾಲಿ ಕಾರ್ಯಕ್ರಮವನ್ನು ನಿಗದಿತ ಸಮಯದೊಳಗೆ ನಡೆಸಬೇಕು. ಧಾರ್ಮಿಕ ಹಬ್ಬಗಳ ಆಚರಣೆ ವೇಳೆ ರಾಜಕೀಯಕ್ಕೆ ಅವಕಾಶ ನೀಡಬೇಡಿ ಎಂದರು.

ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಮಾತನಾಡಿ, ಪಟ್ಟಣದಲ್ಲಿ ಅನಧಿಕೃತ ಫ್ಲೆಕ್ಸ್, ಬ್ಯಾನರ್ ಹಾವಳಿ ಹೆಚ್ಚಾಗಿದೆ. ಪರವಾನಗಿ ಪಡೆಯದೆ ಅಳವಡಿಸಿರುವ ಫ್ಲೆಕ್ಸ್ ಪೊಲೀಸ್ ರಕ್ಷಣೆಯಲ್ಲಿ ತೆರವು ಮಾಡಿಸುವುದಾಗಿ ತಿಳಿಸಿ, ಸರ್ಕಾರಿ ನೌಕರರ ಪ್ರತಿಭಟನೆಯ ನಡುವೆಯೂ ಸ್ವಚ್ಛತೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡುವ ಭರವಸೆ ನೀಡಿದರು.

ಉಪ ತಹಶೀಲ್ದಾರ್ ಆರ್. ರವಿ ಮಾತನಾಡಿ, ಸಾಮೂಹಿಕ ಹಬ್ಬ, ಮೆರವಣಿಗೆ ನಡೆಸುವಾಗ ಹೆಚ್ಚು ಸ್ವಯಂ ಸೇವಕರನ್ನು ನಿಯೋಜಿಸಿ ಎಂದು ಕಿವಿ ಮಾತು ಹೇಳಿದರು.

ನವ ಜವಾನ್ ಉರುಸ್ ಸಮಿತಿ ಅಧ್ಯಕ್ಷ ಖಾದರ್ ಬಾಷಾ, ಮುಖಂಡರಾದ ಸೈಯದ್ ಜಾಕೀರ್, ಎಂ ಬಿ ಫೈಜು, ಪುರಸಭೆ ಸದಸ್ಯರಾದ ನಯಾಜ್, ಬೆಣ್ಣೆಹಳ್ಳಿ ಸಿದ್ದೇಶ್, ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿ ಕುಮಾರ್, ಪುರಸಭೆ ಮಾಜಿ ಸದಸ್ಯರಾದ ಯೂಸುಫ್,ಭಾನುವಳ್ಳಿ ಸುರೇಶ್, ದಾದಾವಲಿ ಮಾತನಾಡಿದರು.

ಪುರಸಭೆ ಸದಸ್ಯರಾದ ಭೋವಿ ಶಿವು, ಸಾಬೀರ್ ಅಲಿ, ಟಿ.ಹನುಮಂತಪ್ಪ, ದಾದಾಪೀರ್, ಪಿ.ಆರ್ ರಾಜು, ಖುದ್ದಸ್ ಸಾಬ್, ಚಮನ್ ಷಾ ,ಪಾಳೆಗಾರ್ ನಾಗರಾಜ್, ಓ.ಜಿ ಕುಮಾರ್, ನರಸಿಂಹಪ್ಪ ಮತ್ತಿತರರು ಸಭೆಯಲ್ಲಿದ್ದರು.

ಪಿಎಸ್‌ಐ ಪ್ರಭು ಕೆಳಗಿನಮನೆ ಸ್ವಾಗತಿಸಿದರು.

## ಹಡಗಲಿ ಪುರಸಭೆ : ಬಜೆಟ್ ಮಂಡನೆ

ಹೂವಿನಹಡಗಲಿ, ಫೆ.28- ಸ್ಥಳೀಯ ಪುರಸಭೆಯ 2023-24ನೇ ಸಾಲಿನ ಆಯ-ವ್ಯಯ ಮುಂಗಡ ಪತ್ರವನ್ನು ಅಧ್ಯಕ್ಷರಾದ ಜ್ಯೋತಿ ಮಲ್ಲಣ್ಣ ಮಂಡಿಸಿದರು. ಅಂತಿಮವಾಗಿ 42,48,696 ರೂ. ಉಳಿತಾಯವಾಗಿದೆ ಎಂದು ಪ್ರಕಟಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರು ಮೇಜು ಕುಟ್ಟಿ ಉಳಿತಾಯ ಬಜೆಟ್ಟನ್ನು ಸ್ವಾಗತಿಸಿದರು. ಸಭೆಯಲ್ಲಿ ಬಿಜೆಪಿ ಸದಸ್ಯರು ನಾಮ ನಿರ್ದೇಶಕ ಸದಸ್ಯರಾದಿಯಾಗಿ ಅನುಮೋದನೆಯನ್ನ ಕೊಟ್ಟರು. ಕಚೇರಿಯ ನೌಕರ ಜಿ.ಮೈಲಾರಪ್ಪ 2023-24ನೇ ಸಾಲಿನ ನೀರಿಕ್ಷಿತ ಆದಾಯ ಮತ್ತು ವೆಚ್ಚ ಗಳ ಸಂಕ್ಷಿಪ್ತ ಮಾಹಿತಿಯನ್ನು ಸಭೆ ಗಮನಕ್ಕೆ ತಂದರು. ಕರ್ನಾಟಕ ಪುರಸಭೆ ಕಾಯ್ದೆ 1964 ಕಲಂ 287ರ ಪ್ರಕಾರ ಪ್ರಸಕ್ತ ಸಾಲಿನ ಆಯ-ವ್ಯಯವನ್ನು ಮಂಜೂರು ಮಾಡಲಾಯಿತು. ಉಪಾಧ್ಯಕ್ಷ ಎಸ್.ತಿಮ್ಮಣ್ಣ, ಮುಖ್ಯಾಧಿ ಕಾರಿ ಹೆಚ್.ಇಮಾಮ್ ಸಾಬ್ ಉಪಸ್ಥಿತರಿದ್ದರು.

ವಿವರ: ಆರಂಭದ ಸಿಲ್ಕು 13,33, 67,222 ರೂ. ರಾಜಸ್ವ ಆದಾಯ 8,70,16 ,387 ರೂ. ಬಂಡವಾಳ ಆದಾಯ 3,02,00 ರೂ. ಮತ್ತು ರಾಜಸ್ವ ಪಾವತಿಗಳು 7,94,95, 000 ರೂ. ಬಂಡವಾಳ ಪಾವತಿಗಳು 5,20,09, 755 ರೂ. ಅಂತಿಮ ಸಿಲ್ಕ್ 13,76,15,918 ರೂ. ಮೇಲಿನಂತೆ ಆದಾಯ ನಿರೀಕ್ಷಿಸಲಾಗಿದೆ.

## ಹರಿಹರದಲ್ಲಿ ಇಂದು ಕರವೇ ಬೆಳ್ಳಿ ಮಹೋತ್ಸವ




ಹರಿಹರ, ಫೆ,28- ನಗರದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ವತಿಯಿಂದ ಕರವೇ 25ರ ಬೆಳ್ಳಿ ಹಬ್ಬದ ಆಚರಣೆಯನ್ನು ಮಾರ್ಚ್ 1 ರ ಬುಧವಾರ ಅದ್ದೂರಿಯಾಗಿ ನಡೆಸಲಾಗುತ್ತದೆ ಎಂದು ತಾಲ್ಲೂಕು ಕರವೇ ಅಧ್ಯಕ್ಷ ಹೆಚ್. ರಾಜೇಶ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ನಗರದ ಹವಳದ ಬೀದಿಯಲ್ಲಿ ಬೆಳಗ್ಗೆ 9 ಗಂಟೆಗೆ ಕೋಡಿಯಾಲ ಹೊಸಪೇಟೆ ಪುಣ್ಯಕೋಟಿ ಮಠದ ಶ್ರೀ ಜಗದೀಶ್ವರ ಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಧ್ವಜಾರೋಹಣವನ್ನು ನಗರ ಠಾಣೆ ಸಿಪಿಐ ದೇವಾನಂದ ಮಾಡಲಿದ್ದಾರೆ.

ಸಂಜೆ 5-30 ಗಂಟೆಗೆ ದೇವಸ್ಥಾನ ರಸ್ತೆಯಲ್ಲಿ ರಸಮಂಜರಿ ಕಾರ್ಯಕ್ರಮ, ಕಾರ್ಯಕ್ರಮದ ಉದ್ಘಾಟನೆಯನ್ನು ಕರವೇ ಜಿಲ್ಲಾ ಅಧ್ಯಕ್ಷ ಎಂ.ಎಸ್. ರಾಮೇಗೌಡರು ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ನಿವೃತ್ತ ಪ್ರಾಂಶುಪಾಲ ಡಾ ಎಸ್.ಹೆಚ್. ಪ್ಯಾಟಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕರಾದ ಬಿ.ಪಿ. ಹರೀಶ್, ಹೆಚ್.ಎಸ್. ಶಿವಶಂಕರ್, ಜಿಪಂ ಮಾಜಿ ಅಧ್ಯಕ್ಷ ಎ.ಗೋವಿಂದ ರಡ್ಡಿ, ತಹಶೀಲ್ದಾರ್ ಪೃಥ್ವಿ ಸಾನಿಕಂ, ನಗರಸಭೆ ಅಧ್ಯಕ್ಷೆ ಶಾಹೀನಾಬಾನು ದಾದಾಪೀರ್, ಉಪಾಧ್ಯಕ್ಷ ಎ ವಾಮನಮೂರ್ತಿ, ಪೌರಾಯುಕ್ತ ಐಗೂರು ಬಸವರಾಜ್, ಎಂ. ನಾಗೇಂದ್ರಪ್ಪ, ಚಂದ್ರಶೇಖರ್ ಪೂಜಾರ್, ದೀಟೂರು ಮಹೇಶ್ವರಪ್ಪ , ನಂದಿಗಾವಿ ಶ್ರೀನಿವಾಸ್ ದೇವೇಂದ್ರಪ್ಪ ಕುಣೆಬೆಳಕೇರಿ, ವಿಶೇಷ ಆಹ್ವಾನಿತರಾಗಿ ಕೃಷ್ಣ ಸಾಭೂತೆ, ಡಿ ಹೇಮಂತರಾಜ್, ಡಿ.ಜಿ. ರಘುನಾಥ್, ಎಂ.ಬಿ.ಅಣ್ಣಪ್ಪ, ಸಿ.ಎನ್. ಹುಲುಗೇಶ್, ಬಿ. ರೇವಣಸಿದ್ದಪ್ಪ, ಶಂಕರ್ ಖಟಾವ್ಕರ್, ಡಾ ನಬೀ, ಡಾ ಸವಿತಾ ಸೇರಿದಂತೆ ಹಲವರು ವಿಶೇಷ ಆಹ್ವಾನಿತರಾಗಿ ಆಗಮಿಸುತ್ತಾರೆ.

ಈ ಸಂದರ್ಭದಲ್ಲಿ ಕರವೇ ಗೌರವಾಧ್ಯಕ್ಷ ಬಿ. ಮುಗ್ದುಮ್, ಉಪಾಧ್ಯಕ್ಷ ಎಸ್ ರುದ್ರಗೌಡ್ರು, ಕೆ ಅಮಾನುಲ್ಲಾ, ಮಹಿಳಾ ಘಟಕದ ಗೌರವಾಧ್ಯಕ್ಷೆ ರೋಹಿಣಿ ಕುಲಕರ್ಣಿ, ಅಧ್ಯಕ್ಷೆ ಎ.ಟಿ. ನೇತ್ರಾವತಿ, ಉಪಾಧ್ಯಕ್ಷರಾದ ನಾಗಮ್ಮ ಪಿ. ಮಾಲಾ ಕನಬರ್ಕರ್ ಇತರರು ಹಾಜರಿದ್ದರು.

# ಮನೀಶ್ ಸಿಸೋಡಿಯಾ ಬಂಧನ ಖಂಡಿಸಿ ಆಮ್ ಆದ್ಮಿ ಪ್ರತಿಭಟನೆ




ದಾವಣಗೆರೆ, ಫೆ.28- ಅಬಕಾರಿ ನೀತಿಯಲ್ಲಿ ಅವ್ಯವಹಾರ ನಡೆಸಿದ ಆರೋಪದ ಮೇಲೆ ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರನ್ನು ಸಿ.ಬಿ.ಐ ಅಧಿಕಾರಿಗಳು ಬಂಧಿಸಿರುವುದನ್ನು ಖಂಡಿಸಿ ಆಮ್ ಆದ್ಮಿ ಪಕ್ಷದ ಜಿಲ್ಲಾ ಘಟಕದ ವತಿಯಿಂದ ಮಂಗಳವಾರ ನಗರದ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ದೆಹಲಿ ಶಿಕ್ಷಣ ಸಚಿವರಾಗಿ ಲಕ್ಷಾಂತರ ಮಕ್ಕಳ ಭವಿಷ್ಯ ರೂಪಿಸಿದ ಮನೀಶ್ ಸಿಸೋಡಿಯಾರನ್ನು ಸುಳ್ಳು ಪ್ರಕರಣದಲ್ಲಿ ಬಂಧಿಸಲಾಗಿದ್ದು, ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಚಂದ್ರು ಬಸವಂತಪ್ಪ, ಕಾರ್ಯದರ್ಶಿ ಅರುಣ್ ಕುಮಾರ್, ಸಂಘಟನಾ ಕಾರ್ಯದರ್ಶಿ ಅದಿಲ್ ಖಾನ್ ಎಸ್.ಕೆ, ಮುಖಂಡರಾದ ಶಬ್ಬೀರ್ ಅಹಮದ್, ರವೀಂದ್ರ.ಕೆ, ವೆಂಕಟೇಶ್, ಆಯಿಷಾ, ಧನ್ಯ ನಾಯ್ಕ್, ಚಂದ್ರಪ್ಪ, ಕಲ್ಲೇಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

## ಹಾಲಿವಾಣ ಗ್ರಾ.ಪಂ. ಅಧ್ಯಕ್ಷರಾಗಿ ಚಿಕ್ಕಣ್ಣ



ಮಲೇಬೆನ್ನೂರು, ಫೆ. 28- ಹಾಲಿವಾಣ ಗ್ರಾ.ಪಂ. ಅಧ್ಯಕ್ಷರಾಗಿ ಡಿ.ಡಿ. ಚಿಕ್ಕಣ್ಣ ಅವರು ಮಂಗಳವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ. ಕೊಮಾರನಹಳ್ಳಿಯ ಮಡಿವಾಳರ ಬಸವರಾಜ್ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಚಿಕ್ಕಣ್ಣ 9 ಮತಗಳನ್ನು ಪಡೆದು ಆಯ್ಕೆಯಾದರೆ, ಬಿ.ಎಸ್. ಹನುಮಗೌಡ 7 ಮತಗಳನ್ನು ಪಡೆದು ಪರಾಭವಗೊಂಡರು. ತಾ.ಪಂ. ಇಓ ಗಂಗಾಧರನ್ ಅವರು ಚುನಾವಣಾಧಿಕಾರಿಯಾಗಿದ್ದರು. ಚುನಾವಣೆ ನಂತರ ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ ಸೇರಿದಂತೆ ಇತರರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

## ಪ್ರತಿ ಜಿಲ್ಲೆಯಲ್ಲಿ ಸಮಾವೇಶ

ಬೆಂಗಳೂರು, ಫೆ. 28 – ಪ್ರತಿ ಜಿಲ್ಲೆಯಲ್ಲೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳ ಫಲಾನುಭವಿಗಳ ಸಮಾವೇಶ ನಡೆಸಲಾಗುವುದು ಎಂದು ಅಬಕಾರಿ ಸಚಿವ ಕೆ. ಗೋಪಾಲಯ್ಯ ತಿಳಿಸಿದರು.

ವಿಧಾನಸೌಧದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಪ್ರಯೋಜನ ಪಡೆದ ಈ ಎಲ್ಲಾ ಫಲಾನುಭವಿಗಳನ್ನು ಒಂದೆಡೆ ಸೇರಿಸಿ ಅವರೊಡನೆ ಯೋಜನೆಗಳು ತಲುಪಿರುವುದನ್ನು ಖಾತ್ರಿ ಪಡಿಸಬೇಕು ಹಾಗೂ ಈ ಯೋಜನೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಮತ್ತು ಈ ಫಲಾನುಭವಿಗಳೊಡನೆ ಸಮಾಲೋಚಿಸಿ, ಮತ್ತಷ್ಟು ಜನಹಿತ ಚಿಂತನೆಗಳನ್ನು ಯೋಚಿಸಿ, ಯೋಜಿಸಬೇಕೆಂಬುದು ನಮ್ಮ ಮುಖ್ಯಮಂತ್ರಿಗಳ ಆಶಯವಾಗಿದೆ ಎಂದರು.

ಇದಕ್ಕಾಗಿ ನಾವು ಪ್ರತೀ ಜಿಲ್ಲೆಯಲ್ಲೂ ಫಲಾನುಭವಿಗಳ ಸಮಾವೇಶಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ. ಪ್ರಧಾನಮಂತ್ರಿ ಆವಾಸ್ ಯೋಜನೆ, ಆಯುಷ್ಮಾನ್ ಭಾರತ, ಆರೋಗ್ಯ ಕರ್ನಾಟಕ, ಪಿಎಂ ಕಿಸಾನ್ ಸಮ್ಮಾನ್ ನಿಧಿ, ರೈತ ವಿದ್ಯಾನಿಧಿ ವಿದ್ಯಾರ್ಥಿ ವೇತನ, ಲಂಬಾಣಿ ಜನಾಂಗದವರಿಗೆ ನೀಡಿದ ಹಕ್ಕು ಪತ್ರ ವಿತರಣೆ, ನೇಕಾರ ಮೀನುಗಾರರಿಗೆ ಸಮ್ಮಾನ್ ಯೋಜನೆ, ಮಾತೃ ವಂದನ ಯೋಜನೆ ಮತ್ತಿತರೆ ಯೋಜನೆಗಳ ಲಾಭ ನೇರವಾಗಿ ಜನರಿಗೆ ತಲುಪಿಸಲಾಗುವುದು ಎಂದು ಹೇಳಿದರು.


## ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ

ಶ್ರೀ ಡಿ. ದೇವರಾಜ ಅರಸು ಬಡಾವಣೆ, ಎ ಬ್ಲಾಕ್, ಪಿ.ಬಿ. ರಸ್ತೆ, ದಾವಣಗೆರೆ-577 006.

ನಂ:ದಾಹನಪ್ರಾ:ತಾಶಾ:ಸಇಂ-2:ದೇಅಬ:ಇ-ಹರಾಜು ಪ್ರಕಟಣೆಮೂಕ-03.2022-23 ದಿನಾಂಕ : 24.02.2023

### ಇ-ಹರಾಜು ಮೂರನೇ ಕರೆ

### ವಸತಿ ಮಧ್ಯಂತರ ಬಿಡಿ ನಿವೇಶನ ಇ-ಹರಾಜು ಪ್ರಕಟಣೆ

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಲಾಗಿರುವ ಶ್ರೀ ಡಿ. ದೇವರಾಜ ಅರಸು ಬಡಾವಣೆಯ ಎ ಬ್ಲಾಕ್‌ನಲ್ಲಿರುವ ಪೂಜಾ ಇಂಟರ್ ನ್ಯಾಷನಲ್ ಹೋಟೆಲ್ ಹಿಂಭಾಗದ ಒಂದು ವಸತಿ ನಿವೇಶನಕ್ಕೆ ಇ-ಹರಾಜು ಪ್ರಕಟಣೆ ನೀಡಲಾಗಿದೆ. 1) ಇ-ಹರಾಜು ತೆರೆಯುವ ಹಾಗೂ ನೊಂದಾಯಿಸಿಕೊಳ್ಳಲು ಆರಂಭಿಸುವ ದಿನಾಂಕ : 24.02.2023 ಭಾರತೀಯ ಕಾಲಮಾನ ಸಾಯಂಕಾಲ 4.00 ಗಂಟೆಯ ನಂತರ (2) ಇ-ಹರಾಜಿನಲ್ಲಿ ಪಾಲ್ಗೊಳ್ಳಲು ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕ: 10.03.2023, ಭಾರತೀಯ ಕಾಲಮಾನ ಸಾಯಂಕಾಲ 4.00 ಗಂಟೆಯವರೆಗೆ (3) ಇ-ಹರಾಜಿನಲ್ಲಿ ಬಿಡ್ಡಿಂಗ್ ಪ್ರಾರಂಭಿಸುವ ದಿನಾಂಕ : 13.03.2023 ಭಾರತೀಯ ಕಾಲಮಾನ ಬೆಳಿಗ್ಗೆ 11.00 ಗಂಟೆಯಿಂದ (4) ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ : 20.03.2023 ಭಾರತೀಯ ಕಾಲಮಾನ ಅಪರಾಹ್ನ 4.00/16.00 ಗಂಟೆಗೆ.

### ಶ್ರೀ ಡಿ. ದೇವರಾಜ ಅರಸು ಬಡಾವಣೆಯ ಎ ಬ್ಲಾಕ್‌ನಲ್ಲಿರುವ ವಸತಿ ಮಧ್ಯಂತರ ಬಿಡಿ ನಿವೇಶನದ ವಿವರ

| ಕ್ರ.ಸಂ. | ನಿವೇಶನ ಸಂಖ್ಯೆ | ನಿವೇಶನದ ಅಳತೆ ಮೀಟರ್‌ಗಳಲ್ಲಿ | ನಿವೇಶನದ ವಿಸ್ತೀರ್ಣ ಚ.ಮೀಟರ್‌ಗಳಲ್ಲಿ | ನಿವೇಶನದ ವಿಸ್ತೀರ್ಣ ಚ.ಅಡಿಗಳಲ್ಲಿ | ಪ್ರಾಧಿಕಾರದಿಂದ ನಿಗಧಿಪಡಿಸಿರುವ ಕನಿಷ್ಠ ಬೆಲೆ (ರೂ. ಲಕ್ಷಗಳಲ್ಲಿ) |
|---|---|---|---|---|---|
| 01 | 323 | 8,84+15. 24/2x18.29 | 220.21 | 2370.00 | 96,34,188-00 |

ಇ-ಹರಾಜಿನಲ್ಲಿ ಅನ್‌ಲೈನ್ ಮೂಲಕ ಭಾಗವಹಿಸುವುದಕ್ಕೆ ಮತ್ತು ನಿವೇಶನಗಳ ವಿವರಗಳಿಗೆ ಸಂಬಂಧಿಸಿದಂತೆ ಮಾಹಿತಿ ಪಡೆಯಲು ಪ್ರಾಧಿಕಾರದ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾದ

**ದೂರವಾಣಿ ಸಂಖ್ಯೆ : 08192-259394/91-8088350917**

ಇ-ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://www.eproc.karnataka.gov.inನ್ನು ಸಂಪರ್ಕಿಸಿ.

(ಸಹಿ/-) ಬಸವನಗೌಡ ಕೋಟೂರ
ಕೆಎಎಸ್ (ಕಿ.ಶ್ರೇ), ಆಯುಕ್ತರು
ದಾ-ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

(ಸಹಿ/-) (ಪ್ರಕಾಶ್ ಎ.ವೈ.)
ಅಧ್ಯಕ್ಷರು, ದಾ-ಹ ನಗರಾಭಿವೃದ್ಧಿ ಪ್ರಾಧಿಕಾರ,
ದಾವಣಗೆರೆ.


## ಸರ್ಕಾರಿ ನೌಕರರ ಮುಷ್ಕರಕ್ಕೆ ಕಂದಾಯ ಇಲಾಖೆ ನೌಕರರ ಬೆಂಬಲ

ದಾವಣಗೆರೆ, ಫೆ. 28- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ನೌಕರರ ಭತ್ಯೆಗಳ ಪರಿಷ್ಕರಣೆ ಮತ್ತು ಹಳೇ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲು ಒತ್ತಾಯಿಸಿ ಮಾರ್ಚ್ 1 ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದು, ಕರ್ನಾಟಕ ರಾಜ್ಯ ಸರ್ಕಾರಿ ಕಂದಾಯ ಇಲಾಖಾ ನೌಕರರ ಸಂಘದ ಜಿಲ್ಲಾ ಘಟಕ ಬೆಂಬಲ ವ್ಯಕ್ತಪಡಿಸಿದೆ ಎಂದು ಸಂಘದ ಅಧ್ಯಕ್ಷ ಜಿ.ಎಸ್. ಸಿದ್ದೇಶ್, ಪ್ರಧಾನ ಕಾರ್ಯದರ್ಶಿ ಕೆ.ಎನ್. ಶ್ರೀನಿವಾಸ ತಿಳಿಸಿದ್ದಾರೆ.

### ಶ್ರೀಮತಿ ಲಲಿತಮ್ಮ ನಿಧನ



ದಾವಣಗೆರೆ ವಾಸಿ ದಿ. ದೊಗ್ಗಳ್ಳಿ ಕರಿಬಸಪ್ಪ ಇವರ ಧರ್ಮಪತ್ನಿ ಶ್ರೀಮತಿ ಲಲಿತಮ್ಮ (73) ಇವರು ದಿನಾಂಕ 28.02.2023ರ ಮಂಗಳವಾರ ಮಧ್ಯಾಹ್ನ 1ಕ್ಕೆ ನಿಧನರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 1.03.2023ರ ಬುಧವಾರ ಬೆಳಿಗ್ಗೆ 11 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ಹೊನ್ನಾಳಿಯಲ್ಲಿ ಇಂದು ಸರ್ಕಾರಿ ನೌಕರರಿಂದ ಮುಷ್ಕರ



ಹೊನ್ನಾಳಿ, ಫೆ. 28- ರಾಜ್ಯ ಸರ್ಕಾರಿ ನೌಕರರ ವೇತನ, ಭತ್ಯೆಗಳ ಪರಿಷ್ಕರಣೆ, ಹಳೆ ಪಿಂಚಣಿ ಯೋಜನೆ ಜಾರಿಗೆ ಸಂಬಂಧಪಟ್ಟ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ರಾಜ್ಯ ಸಂಘದ ಕರೆಯ ಮೇರೆಗೆ ಮಾರ್ಚ್ 1ರಿಂದ ಎಲ್ಲಾ ಸರ್ಕಾರಿ ನೌಕರರು ಕೆಲಸಕ್ಕೆ ಗೈರು ಹಾಜರಾಗಿ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲು ನಿರ್ಧರಿಸಿದ್ದಾರೆ ಎಂದು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಿ.ಕುಮಾರ್ ತಿಳಿಸಿದರು.

ಅವರು ಸರ್ಕಾರಿ ನೌಕರರ ಭವನದಲ್ಲಿ ವಿವಿಧ ಸರ್ಕಾರಿ ಸಂಘಗಳ ಜಂಟಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.ಪಿಡಿಓ ಸಂಘದ ಅಧ್ಯಕ್ಷ ಅರುಣ್, ಪ್ರಾ.ಶಾ.ಶಿ. ಸಂಘದ ಅಧ್ಯಕ್ಷ ಪ್ರಕಾಶ್ ನಾಯ್ಕ್ ಮಾತನಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಸರ್ಕಾರಿ ನೌಕರರ ಸಂಘದ ಗೌರವಾಧ್ಯಕ್ಷ ಮುರುಗೇಶಪ್ಪ, ಮಾಜಿ ಅಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ಎಚ್. ಬಿ.ರವಿ, ಖಜಾಂಚಿ ಮಹೇಂದ್ರ, ಪ್ರೌ.ಶಾ.ಶಿ. ಸಂಘದ ಅಧ್ಯಕ್ಷ ರವಿಗೌಡ್ರು, ಪ್ರೌ.ಶಾ. ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಡಿ.ಜಿ. ರಂಗನಾಥ್, ಶಿಕ್ಷಣ ಇಲಾಖೆಯ ಎನ್.ಎಂ. ದೀಪಕ್, ಆರೋಗ್ಯ ಇಲಾಖೆಯ ಪ್ರಕಾಶ್, ಕುಮಾರ್ ನಾಯ್ಕ್, ರಫೀಕ್ ಮುಂತಾದವರು ಉಪಸ್ಥಿತರಿದ್ದರು.

## ಇರಾನ್ : ಬಾಲಕಿಯರ ಶಾಲೆಗಳ ಮೇಲೆ ವಿಷದ ದಾಳಿ

ದುಬೈ, ಫೆ. 28 - ಕಳೆದ ಮೂರು ತಿಂಗಳಲ್ಲಿ ಇರಾನ್‌ನ ವಿವಿಧ ಶಾಲೆಗಳ ನೂರಾರು ವಿದ್ಯಾರ್ಥಿನಿಯರು ವಿಷದ ದಾಳಿಗೆ ಸಿಲುಕಿದ್ದಾರೆ. ಕೆಲವರು ಆಸ್ಪತ್ರೆಗಳಿಗೆ ದಾಖಲಾಗಿದ್ದಾರೆ.

ಸುಮಾರು 30 ಶಾಲೆಗಳ ವಿದ್ಯಾರ್ಥಿನಿಯರ ಮೇಲೆ ವಿಷದ ದಾಳಿ ನಡೆದಿದೆ ಎಂದು ಹೇಳಲಾಗಿದೆ.

ಇರಾನ್‌ನಲ್ಲಿ ಮೂಲಭೂತವಾದಿ ಸರ್ಕಾರ ಇದೆ. ಆದರೆ, ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ಯಾವತ್ತೂ ಅಡ್ಡಿಯಾಗಿರಲಿಲ್ಲ. ಆದರೆ, ಈಗ ಬಾಲಕಿಯರ ಮೇಲೆ ವಿಷದ ದಾಳಿ ನಡೆದಿರುವುದು ಕಳವಳ ತಂದಿದೆ.

ಕಳೆದ ವರ್ಷ ಕೊಮ್ ಎಂಬಲ್ಲಿನ ಶಾಲೆಯ ಮೇಲೆ ಮೊದಲ ವಿಷದ ದಾಳಿ ನಡೆದ ವರದಿಯಾಗಿತ್ತು. ಆರಂಭದಲ್ಲಿ ಈ ದಾಳಿಯ ವರದಿಗಳನ್ನು ತಳ್ಳಿ ಹಾಕಲಾಗಿತ್ತು.

ಚಳಿಗಾಲದ ವೇಳೆ ಇರಾನ್‌ನಲ್ಲಿ ತಾಪಮಾನ ತೀವ್ರವಾಗಿ ಕುಸಿಯುತ್ತಿದೆ. ಈ ಸಂದರ್ಭದಲ್ಲಿ ಅನಿಲ ಆಧರಿತ ಹೀಟರ್ ಬಳಸಲಾಗುತ್ತದೆ. ಇದರಿಂದ ಆಗುವ ತೊಂದರೆಯಿಂದ ವಿದ್ಯಾರ್ಥಿನಿಯರಿಗೆ ಸಮಸ್ಯೆ ಎದುರಾಗಿರಬಹುದು ಎಂದು ಶಂಕಿಸಲಾಗಿತ್ತು.

ಇರಾನ್‌ನ ಗುಪ್ತಚರ ಸಚಿವಾಲಯ ಈ ಬಗ್ಗೆ ತನಿಖೆ ಆರಂಭಿಸಿದೆ.

# ನ್ಯಾಯಯುತ ದರಕ್ಕೆ ಆಗ್ರಹಿಸಿ ರೈತರಿಂದ ಪ್ರತಿಭಟನೆ


ಕೊಟ್ಟೂರು

ಕೊಟ್ಟೂರು, ಫೆ.28- ಸೂರ್ಯಕಾಂತಿ ಬೆಳೆಗೆ ಕಡಿಮೆ ದರವನ್ನು ನಿಗದಿ ಪಡಿಸಿದ ಖರೀದಿದಾರರ ವಿರುದ್ಧ ರೈತರು ಪ್ರತಿಭಟನೆ ನಡೆಸಿದ ಘಟನೆ ಮಂಗಳವಾರ ಪಟ್ಟಣದ ಎಪಿಎಂಸಿಯಲ್ಲಿ ನಡೆದಿದೆ.

ಮಾರುಕಟ್ಟೆಗೆ ಇಂದು 2607 ಕ್ವಿಂಟಲ್ ಸೂರ್ಯಕಾಂತಿ ಮಾಲು ಅವಕವಾಗಿತ್ತು. ಕನಿಷ್ಠ 4129 ರೂ. ಗರಿಷ್ಠ 6709 ರೂ. ದರವನ್ನು ಖರೀದಿದಾರರು ನಿರ್ಧರಿಸಿದ್ದರು. ಕಳೆದ ವಾರ 4550 ರಿಂದ 6909 ರೂ. ಮಾರಾಟವಾಗಿದ್ದರಿಂದ ದರ ಕಡಿಮೆಯಾಯಿತು ಎಂದು ರೈತರು ಇದ್ದಕ್ಕಿದ್ದಂತೆ ಮಾರುಕಟ್ಟೆಯ ಕಚೇರಿಯ ಮುಂದೆ ಪ್ರತಿಭಟನೆಗಿಳಿದರು.

ಪ್ರತಿಭಟನೆ ವಿಷಯ ತಿಳಿದು ಎಪಿಎಂಸಿ ಅಧ್ಯಕ್ಷ ಪೂಜಾರ್ ಉಮೇಶ್, ಉಪಾಧ್ಯಕ್ಷ ಮಂಗಾಪುರ ಸಿದ್ದೇಶಣ್ಣ ಹಾಗೂ ಸಿಪಿಐ ಟಿ. ವೆಂಕಟಸ್ವಾಮಿ ಆಗಮಿಸಿ ರೈತರ ಸಮ್ಮುಖದಲ್ಲಿ ಖರೀದಿದಾರರನ್ನು ವಿಚಾರಿಸಿದಾಗ ಎಣ್ಣೆ ದರ ಕಡಿಮೆಯಾಗಿರುವುದರಿಂದ ಸಹಜವಾಗಿ ಸೂರ್ಯಕಾಂತಿ ಬೆಲೆಯು ಸಹ ಕಡಿಮೆಯಾಗುತ್ತದಲ್ಲದೇ ಮಾಲಿನ ಗುಣಮಟ್ಟಕ್ಕೆ ತಕ್ಕಂತೆ ದರವನ್ನು ನಿಗದಿಪಡಿಸುತ್ತೇವೆ ಎಂದು ಸಮರ್ಥಿಸಿಕೊಂಡರು.

ದುಬಾರಿ ಬೆಲೆಯ ಬೀಜ ಗೊಬ್ಬರಗಳನ್ನು ಖರೀದಿಸಿ ಕಷ್ಟಪಟ್ಟು ದುಡಿದ ಬೆಳೆಯನ್ನು ಮಾರಲು ತಂದರೆ ನ್ಯಾಯಯುತವಾದ ಬೆಲೆ ಸಿಗುತ್ತಿಲ್ಲ, ಅಲ್ಲದೆ ಹಮಾಲರು ಬಾಜು ಎಂದು ಹೇಳಿ 2 ಕೆಜಿ ತಗೆಯುತ್ತಾರೆ. ಚೀಲದ ತೂಕ ಮತ್ತು ವೇಸ್ಟೇಜ್ ಎಂದು ತೂಕದಲ್ಲಿಯೂ ಸಹ ತಗೆಯುತ್ತಾರೆ, ಒಟ್ಟಾರೆ ಎಲ್ಲಾ ರೀತಿಯಿಂದಲೂ ಅನ್ಯಾಯವಾಗುತ್ತದೆ ಎಂದು ಹಿರೇಮಲ್ಲನಕೆರೆ ಗ್ರಾಮದ ಅರಸನಾಳ ಶಂಕ್ರಪ್ಪ, ತಳವಾರ ಗಂಗಪ್ಪ ಹಾಗೂ ಶಿವಬಸಪ್ಪ ಮುಂತಾದ ರೈತರು ನೋವನ್ನು ವ್ಯಕ್ತಪಡಿಸಿದರು.

ಎಪಿಎಂಸಿ ಅಧ್ಯಕ್ಷ ಪೂಜಾರ ಉಮೇಶ್ ಮಾತನಾಡಿ, ಕೊಟ್ಟೂರು ಎಪಿಎಂಸಿ ರೈತರಿಗೆ ನ್ಯಾಯ ದೊರಕಿಸಿಕೊಡುವಲ್ಲಿ ಹೆಸರುವಾಸಿಯಾಗಿದ್ದು ಉತ್ಪನ್ನಗಳ ಗುಣಮಟ್ಟಕ್ಕೆ ತಕ್ಕಂತೆ ಖರೀದಿದಾರರು ದರ ನಿಗದಿಪಡಿಸಿರುತ್ತಾರೆ. ರೈತರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದರು.

ಬೇರೆ ಊರುಗಳ ಖರೀದಿದಾರರು ಖರೀದಿಸಲು ಬಂದರೆ ಸ್ಪರ್ಧಾತ್ಮಕ ಬೆಲೆ ದೊರೆಯುತ್ತದೆ, ಆದರೆ ಸ್ಥಳೀಯ ಖರೀದಿದಾರರೆ ಖರೀದಿಸುವುದರಿಂದ ಹೆಚ್ಚಿನ ಬೆಲೆ ಸಿಗುವುದಿಲ್ಲ ಎಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಎನ್. ಭರಮಣ್ಣ ಆಕ್ರೋಶ ವ್ಯಕ್ತಪಡಿಸಿದರು.

ಎಪಿಎಂಸಿ ನಿರ್ದೇಶಕ ಎಚ್. ಗುರುಬಸವರಾಜ್, ಪಿಎಸ್‌ಐ ಎಂ.ವೆಂಕಟೇಶ್, ಕಾರ್ಯದರ್ಶಿ ಎ.ಕೆ.ವೀರಣ್ಣ ಹಾಗೂ ಬಸವರಾಜ್ ಮತ್ತಿತರರು ಇದ್ದರು.

# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಮಾರ್ಚ್ 01, 2023

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ


## ಸರ್ಕಾರಿ ನೌಕರರ ಮುಷ್ಕರ ಶುರು



ಬೆಂಗಳೂರು, ಫೆ. 28 - ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ಸರ್ಕಾರಿ ನೌಕರರು ಮತ್ತು ಮುಖ್ಯಕಾರ್ಯದರ್ಶಿಯವರ ನಡುವೆ ನಡೆದ ಮಾತುಕತೆ ವಿಫಲವಾಗಿದ್ದು, ನಾಳೆ ಬುಧವಾರದಿಂದ ನೌಕರರು ಕರ್ತವ್ಯಕ್ಕೆ ಗೈರು ಹಾಜರಾಗುವ ತೀರ್ಮಾನ ಕೈಗೊಂಡಿದ್ದಾರೆ.

ನೌಕರರ ವೇತನ ಪರಿಷ್ಕರಣೆ ಕುರಿತು ಬಜೆಟ್‌ನಲ್ಲಿ ಘೋಷಣೆ ಮಾಡದ ರಾಜ್ಯ ಸರ್ಕಾರದ ಧೋರಣೆ ಖಂಡಿಸಿ, ಹಾಗೂ ಹೊಸ ಪಿಂಚಣಿ ನೀತಿಗೆ ಒತ್ತಾಯಿಸಿ, ನಾಳೆಯಿಂದ ಕರ್ತವ್ಯಕ್ಕೆ ಗೈರು ಹಾಜರಾಗುವ ಮೂಲಕ ಅನಿರ್ದಿಷ್ಟ ಅವಧಿ ಮುಷ್ಕರಕ್ಕೆ ಧುಮುಕಲಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಸಲಹೆ ಮೇರೆಗೆ ಮುಖ್ಯ ಕಾರ್ಯದರ್ಶಿಯವರು ಇಂದು ಮಧ್ಯಾಹ್ನ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳ ಜೊತೆ ಸುಧೀರ್ಘ ಸಮಾಲೋಚನೆ ನಡೆಸಿದರೂ, ಯಾವುದೇ ಪ್ರಯೋಜನವಾಗಲಿಲ್ಲ.

ವೇತನ ಆಯೋಗಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಯವರು ಬಜೆಟ್‌ನಲ್ಲಿ ಹಣ ಮೀಸಲಿರಿಸಿ, ಘೋಷಣೆ ಮಾಡುವವರೆಗೂ ತಮ್ಮ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ ಎಂದು ನೌಕರರು ಪಟ್ಟು ಹಿಡಿದ ಹಿನ್ನೆಲೆಯಲ್ಲಿ ಮಾತುಕತೆ ವಿಫಲವಾಯಿತು.

ಮುಖ್ಯ ಕಾರ್ಯದರ್ಶಿಯವರು ಮುಷ್ಕರ ಕೈಬಿಡುವಂತೆ ಮನವಿ ಮಾಡಿದ್ದಲ್ಲದೆ, ನೌಕರರಿಗೆ ದೊರ ಕಬೇಕಾದ ಸವಲತ್ತು ಮತ್ತು 7ನೇ ವೇತನ ಆಯೋಗದ ಮಧ್ಯಂತರ ವರದಿಗೆ ಹಣ ಬಿಡುಗಡೆ ಸಂಬಂಧ ಈಗಾಗಲೇ ಘೋಷಣೆ ಮಾಡಿದ್ದಾರೆ. ಅನುಷ್ಠಾನಗೊಳಿಸಲು ಒಂದಷ್ಟು (7ನೇ ಪುಟಕ್ಕೆ)

### ವೇತನ ಆಯೋಗದಿಂದ ಮಧ್ಯಂತರ ವರದಿ ಪಡೆದು ಜಾರಿ : ಸಿಎಂ ಭರವಸೆ

ಬೆಂಗಳೂರು, ಫೆ. 28 - 7ನೇ ವೇತನ ಆಯೋಗದ ಮಧ್ಯಂತರ ವರದಿ ಪಡೆದು ಅನುಷ್ಠಾನ ಮಾಡಲಾಗುವುದು ಎಂದು ಬಸವರಾಜ ಬೊಮ್ಮಾಯಿ ಅವರು ಭರವಸೆ ನೀಡಿದರು.

ಸುದ್ದಿ ಮಾಧ್ಯಮಗಳೊಂದಿಗೆ ಮಾತನಾಡಿರುವ ಬಸವರಾಜ ಬೊಮ್ಮಾಯಿ, ಈ ವರ್ಷದ ಬಜೆಟ್‌ನಲ್ಲಿ ನಾವು 7ನೇ ವೇತನ ಆಯೋಗದ ವರದಿಗಾಗಿಯೇ ಹಣ ಮೀಸಲಿಟ್ಟಿದ್ದೇವೆ. ಆಯೋಗದ ಮಧ್ಯಂತರ ವರದಿ ಪಡೆದುಕೊಂಡ ನಂತರ ಅದನ್ನು ಅನುಷ್ಠಾನ ಮಾಡುತ್ತೇವೆ ಎಂದು ಹೇಳಿದರು. ಬಸವರಾಜ ಬೊಮ್ಮಾಯಿ ಅವರು 7ನೇ ವೇತನ (7ನೇ ಪುಟಕ್ಕೆ)

### ಸರ್ಕಾರದ ಸಂಧಾನಕ್ಕೆ ಬಗ್ಗುವುದಿಲ್ಲ : ಷಡಕ್ಷರಿ

ಬೆಂಗಳೂರು, ಫೆ. 28 – ರಾಜ್ಯ ಬಜೆಟ್ ನಲ್ಲಿ 7ನೇ ವೇತನ ಆಯೋಗ ಬಗ್ಗೆ ಪ್ರಸ್ತಾಪ ಮಾಡಿಲ್ಲ. ನಾಳೆಯಿಂದ ಮಾ.1ರಿಂದ ಸಾಮೂಹಿಕವಾಗಿ ಸರ್ಕಾರಿ ನೌಕರರು ಮುಷ್ಕರಕ್ಕೆ ಇಳಿಯಲಿದ್ದೇವೆ. ಈ ಹಿನ್ನೆಲೆಯಲ್ಲಿ ನಾಳೆಯಿಂದ ಎಲ್ಲಾ ಸರ್ಕಾರಿ ಸೇವೆಗಳು ಏಕಕಾಲದಲ್ಲಿ ಬಂದ್ ಆಗುತ್ತವೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಅವರು, ಸರ್ಕಾರ ಯಾವುದೇ ಕ್ರಮ ಕೈಗೊಂಡರೂ ನಾವು ಸ್ವಾಗತಿಸುತ್ತೇವೆ. ಯಾವುದೇ ಸಂಧಾನಕ್ಕೆ ನಾವು ಬಗ್ಗುವುದಿಲ್ಲ. 7ನೇ ವೇತನ ಆಯೋಗ ವರದಿ ಜಾರಿಯಾದ್ರೆ ಮಾತ್ರ ಮುಷ್ಕರ ಹಿಂದಕ್ಕೆ ಪಡೆಯಲಾಗುವುದು ಎಂದು ಸ್ಪಷ್ಟಪಡಿಸಿದರು.

# ಮಾತೃಭಾಷೆಯಿಂದಲೇ ಪ್ರಗತಿ ಪಥ

## ರಷ್ಯಾ, ಜರ್ಮನಿ, ಜಪಾನ್ ಹಾಗೂ ಫ್ರಾನ್ಸ್‌ನಂತಹ ದೇಶಗಳಲ್ಲಿ ಮಾತೃಭಾಷೆಯಲ್ಲೇ ತಾಂತ್ರಿಕ ಶಿಕ್ಷಣ : ದಾವಣಗೆರೆ ವಿ.ವಿ. ಘಟಿಕೋತ್ಸವದಲ್ಲಿ ರಾಜ್ಯಪಾಲ ಗೆಹ್ಲೋಟ್

ದಾವಣಗೆರೆ, ಫೆ. 28 - ರಷ್ಯಾ, ಜರ್ಮನಿ, ಜಪಾನ್ ಹಾಗೂ ಫ್ರಾನ್ಸ್ ಮುಂತಾದ ಮುಂದುವರಿದ ದೇಶಗಳಲ್ಲಿ ಮಾತೃಭಾಷೆಯಲ್ಲಿಯೇ ತಾಂತ್ರಿಕ ಶಿಕ್ಷಣ ನೀಡಲಾಗುತ್ತಿದೆ. ಭಾರತದಲ್ಲೂ ಮಾತೃಭಾಷೆ ಮಾಧ್ಯಮದ ಮೂಲಕ ಉನ್ನತ ಶಿಕ್ಷಣದಲ್ಲಿ ವಿಕಾಸ ಆಗಬೇಕಿದೆ ಎಂದು ರಾಜ್ಯಪಾಲ ತಾವರ್ ಚಂದ್ ಗೆಹ್ಲೋಟ್ ಹೇಳಿದರು.

ದಾವಣಗೆರೆ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾತೃಭಾಷೆಯಿಂದ ಕಲಿಕೆ ಸುಲಭ ಹಾಗೂ ತ್ವರಿತವಾಗುತ್ತದೆ. ಮಕ್ಕಳು ತಾವು ಆಡುವ ಹಾಗೂ ಸುತ್ತ ಮುತ್ತಲು ಕೇಳುವ ಭಾಷೆಯನ್ನೇ ಶಿಕ್ಷಣದಲ್ಲೂ ಬಳಸಿದಾಗ ಕಲಿಕೆಯಿಂದ ಹೆಚ್ಚು ಲಾಭ ಸಿಗುತ್ತದೆ ಎಂದು ಹೇಳಿದರು.

ಮಾತೃಭಾಷೆಯಿಂದ ಉನ್ನತ ಶಿಕ್ಷಣದಲ್ಲಿ ವಿಕಾಸ ಸಾಧ್ಯವಿದೆ. ಮಾತೃಭಾಷೆ ಬಳಸುವ ಮೂಲಕ ಸಾಂಸ್ಕೃತಿಕ ವೈಭವ ಬೆಳೆಸುವ ಜೊತೆಗೆ ವೈಜ್ಞಾನಿಕ ಶಕ್ತಿಯನ್ನು ಬೆಳೆಸುವ ಮೂಲಕ ದೇಶಕ್ಕೆ ಕೊಡುಗೆ ನೀಡಬೇಕಿದೆ ಎಂದರು.

ಹಿಂದಿನಿಂದಲೂ ಭಾರತ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದು, ವಿಶ್ವಗುರು ಎನಿಸಿಕೊಂಡಿತ್ತು. ಚರಿತ್ರೆ ನಿರ್ಮಾಣ, ಅಧ್ಯಾತ್ಮ ಹಾಗೂ ಸರ್ವಾಂಗೀಣ ಅಭಿವೃದ್ಧಿಗಳು ಹಿಂದಿನ ಶಿಕ್ಷಣ ಪದ್ಧತಿಯಲ್ಲಿದ್ದವು. ಆಗ ಆರ್ಥಿಕ ವ್ಯವಸ್ಥೆ ಸದೃಢವಾಗಿತ್ತು. ಭಾರತ ಬಂಗಾರದ ಗಿಳಿ ಆಗಿತ್ತು ಎಂದು ರಾಜ್ಯಪಾಲರು ಹೇಳಿದರು.

ಈಗಲೂ ಅಂತಹ ಗುಣಗಳು ಹುದುಗಿವೆ. ಈಗಲೂ ಭಾರತದಲ್ಲಿ ಸಮೃದ್ಧಿ ಇದೆ. ಅವುಗಳನ್ನು ಸರಿಯಾಗಿ ಬಳಸಿ ಬೆಳವಣಿಗೆ ಹಾಗೂ ಸಮಾನತೆ ಕಾಣಬೇಕಿದೆ ಎಂದವರು ಹೇಳಿದರು.



### ಮೂವರಿಗೆ ಗೌರವ ಡಾಕ್ಟರೇಟ್ ಪ್ರದಾನ

**ಉದ್ಯಮಿ ಮತ್ತು ಲೆಕ್ಕ ಪರಿಶೋಧಕ ಅಥಣಿ ಎಸ್. ವೀರಣ್ಣ ಮತ್ತು ಸಮಾಜ ಸೇವೆಗಾಗಿ ಹರಪನಹಳ್ಳಿಯ ತಗ್ಗಿನಮಠ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಟಿ.ಎಂ.ಚಂದ್ರಶೇಖರಯ್ಯ ಅವರಿಗೆ ಹಾಗೂ ಶಿಕ್ಷಣ ಸೇವೆಗಾಗಿ ಸಿದ್ಧಗಂಗಾ ಶಿಕ್ಷಣ ಸಂಸ್ಥೆಯ ಸ್ಥಾಪಕ ಶಿವಣ್ಣ ಅವರಿಗೆ ಮರಣೋತ್ತರ ಗೌರವ ಡಾಕ್ಟರೇಟ್ ಗೌರವ ನೀಡಲಾಯಿತು. ಶಿವಣ್ಣ ಅವರ ಪರವಾಗಿ ಪತ್ನಿ ಜಸ್ಟಿನ್ ಡಿಸೌಜ ಅವರು ಡಾಕ್ಟರೇಟ್ ಸ್ವೀಕರಿಸಿದರು.**

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಶಿಕ್ಷಣ ನೀತಿಯಲ್ಲಿ ಪರಿವರ್ತನೆ ತಂದು ಕೌಶಲ್ಯ ಹಾಗೂ ನೈತಿಕ ಮೌಲ್ಯದೊಂದಿಗೆ ಹೊಸ ಶ್ರೇಷ್ಠ ಆತ್ಮನಿರ್ಭರ ಭಾರತದ ಬದ್ಧತೆ ತೋರಿಸುತ್ತಿದ್ದಾರೆ. ನವ ಭಾರತ ನಿರ್ಮಾಣದಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಮಹತ್ವದ ಪಾತ್ರ ಹೊಂದಿದೆ ಎಂದು ಗೆಹ್ಲೋಟ್ ಹೇಳಿದರು.

ವಿದ್ಯಾರ್ಥಿಗಳು ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ಹೊರ ಬೀಳುವುದನ್ನು ತಡೆಯಬೇಕಿದೆ. ಇದಕ್ಕಾಗಿ ಸಿ.ಎಸ್.ಆರ್., ಗ್ರಾಮಗಳು ಹಾಗೂ ವಿದ್ಯಾರ್ಥಿಗಳ ದತ್ತು ಸೇರಿದಂತೆ ಹಲವಾರು ಕ್ರಮಗಳ ಸಾಧ್ಯತೆ ಇದೆ ಎಂದರು.

ಕುಲಪತಿ ಪ್ರೊ.ಬಿ.ಡಿ.ಕುಂಬಾರ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ವಿಶ್ವವಿದ್ಯಾನಿಲಯವು ಹತ್ತು ಗ್ರಾಮಗಳನ್ನು ದತ್ತು ಪಡೆದುಕೊಂಡು ಬೆಳವಣಿಗೆಗೆ ನೆರವಾಗುತ್ತಿದೆ. ಪ್ರಚಾರೋಪನ್ಯಾಸ ಮಾಲೆಯಡಿ 101 ಪುಸ್ತಕಗಳ ಪ್ರಕಟಣೆಗೆ ಸಿದ್ಧತೆ ನಡೆದಿದೆ. ಸಾಂಸ್ಕೃತಿಕ ಹಾಗೂ ಕ್ರೀಡಾ (7ನೇ ಪುಟಕ್ಕೆ)

### ಹೊಸ ವಿಚಾರ, ಚಿಂತನೆಗಳಿಗೆ ಮುಕ್ತವಾಗಿರಿ: ಸೀತಾರಾಮ್

**ದಾವಣಗೆರೆ, ಫೆ. 28 - ತಂತ್ರಜ್ಞಾನದ ಕಾರಣದಿಂದ ಕೆಲ ವಲಯಗಳಲ್ಲಿ ಉದ್ಯೋಗ ನಷ್ಟವಾದರೂ, ಹೊಸ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ಈ ಉದ್ಯೋಗಗಳನ್ನು ಪಡೆಯಲು ನಿರಂತರ ಕೌಶಲ್ಯವೃದ್ಧಿ ಮುಖ್ಯ ಎಂದು ಎಐಸಿಟಿಇ ಅಧ್ಯಕ್ಷ ಪ್ರೊ. ಟಿ.ಜಿ. ಸೀತಾರಾಮ್ ಹೇಳಿದರು.**

**ದಾವಣಗೆರೆ ವಿಶ್ವವಿದ್ಯಾನಿಲಯದ ಹತ್ತನೇ ಘಟಿಕೋತ್ಸವ ಸಮಾರಂಭದಲ್ಲಿ ಅವರು ಘಟಿಕೋತ್ಸವ ಭಾಷಣ ಮಾಡಿದರು.**

**ಐ.ಸಿ.ಟಿ. ಹಾಗೂ ಚಾಟ್‌ಜಿಪಿಟಿ ರೀತಿಯ ಮೊಬೈಲ್ ತಂತ್ರಜ್ಞಾನಗಳು ಹಲವಾರು ಉದ್ಯೋಗಗಳನ್ನು ಮನುಷ್ಯರಿಂದ ಕಸಿಯುತ್ತಿವೆ. ಆದರೆ, ತಂತ್ರಜ್ಞಾನ ಬೆಳವಣಿಗೆ ಹೊಸ ಉದ್ಯೋಗ ಸೃಷ್ಟಿಸುತ್ತಿದೆ ಎಂದರು.**

**ವಿದ್ಯಾರ್ಥಿಗಳು ಕೇವಲ ಜ್ಞಾನ ಪಡೆಯುವುದಷ್ಟೇ ಅಲ್ಲದೇ, ವಿಶ್ಲೇಷಣಾತ್ಮಕ ಚಿಂತನೆ, ಸಮಸ್ಯೆಗಳನ್ನು ಬಗೆಹರಿಸುವುದು, ಸಂವಹನ ಹಾಗೂ ನಾಯಕತ್ವದ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು. ಈ ಕೌಶಲ್ಯಗಳು ನೀವು ಆಯ್ಕೆ ಮಾಡಿಕೊಳ್ಳುವ ವೃತ್ತಿಗೆ ನೆರವಾಗುತ್ತವೆ ಎಂದರು. ವಿಶ್ವವು ವೈವಿಧ್ಯತೆಯಿಂದ ಕೂಡಿದೆ. ಸಾಂಸ್ಕೃತಿಕ ವೈವಿಧ್ಯತೆಗಳಿವೆ. ಇವುಗಳನ್ನು ಸ್ವೀಕ ರಿಸಬೇಕು ಹಾಗೂ ಅವುಗಳಿಂದ ಕಲಿಯಬೇಕು. ಹೊಸ ವಿಚಾರಗಳು ಹಾಗೂ ಚಿಂತನೆಗಳಿಗೆ ಮುಕ್ತವಾಗಿರಬೇಕು. ಆಗ ವ್ಯಕ್ತಿಗತ ಬೆಳವಣಿಗೆ ಸಾಧ್ಯ ಎಂದು ಸೀತಾರಾಮ್ ತಿಳಿಸಿದರು.**

## ಸರ್ಕಾರದಿಂದ ತ್ವರಿತ ಯೋಜನೆ ಅನುಷ್ಠಾನ

**ಮಾರ್ಚ್ ಅಂತ್ಯದ ವೇಳೆಗೆ ಚುನಾವಣೆ ಪ್ರಕಟ ಸಾಧ್ಯತೆ**

ಬೆಂಗಳೂರು, ಫೆ. 28 -ರಾಜ್ಯ ವಿಧಾನಸ ಭೆಯ ಚುನಾವಣಾ ವೇಳಾಪಟ್ಟಿ ಮಾರ್ಚ್ ಇಪ್ಪತ್ತೇಳರ ವೇಳೆಗೆ ಪ್ರಕಟವಾಗುವ ಸಾಧ್ಯತೆ ಇದ್ದು, ಅಷ್ಟರೊಳಗೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಆಡಳಿತಾರೂಢ ಬಿಜೆಪಿ ತನ್ನ ಸಚಿವರು ಮತ್ತು ಶಾಸಕರಿಗೆ ಸಂದೇಶ ರವಾನೆ ಮಾಡಿ ಬಾಕಿ ಉಳಿದಿರುವ ಯೋಜನೆಗಳನ್ನು ತ್ವರಿತಗತಿ ಯಲ್ಲಿ ಪೂರ್ಣಗೊಳಿಸಬೇಕು,ಜನರಿಗೆ ಅದು ತಲುಪು ವಂತಾಗಬೇಕು ಎಂದು ಸಂದೇಶ ರವಾನಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ 2023-24 ನೇ ಸಾಲಿನ ಬಜೆಟ್ ಗೆ ಅನುಮೋದನೆ ಪಡೆದು ಮಾರ್ಚ್ ಒಂದ ರಿಂದಲೇ ಬಜೆಟ್‌ನಲ್ಲಿ ಘೋಷಿಸಿರುವ ಕಾರ್ಯ ಕ್ರಮಗಳನ್ನು ಅನುಷ್ಠಾನಗೊಳಿಸಲು ಮುಂದಾಗಿದ್ದಾರೆ.

ಕೇಂದ್ರ ಸರ್ಕಾರ ಸಹ, ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸುವುದಕ್ಕಿಂತ ಮುನ್ನವೇ ರಾಜ್ಯದಲ್ಲಿ ತಾನು ಕೈಗೊಂಡಿರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಭರದ (7ನೇ ಪುಟಕ್ಕೆ)

## ರಾಸಾಯನಿಕಗಳಿಂದ ಮಣ್ಣಿನ ಫಲವತ್ತತೆ ನಾಶ



**ಸಿಇಒ ಡಾ. ಚನ್ನಪ್ಪ**

ದಾವಣಗೆರೆ, ಫೆ.28 - ಕೃಷಿ ನಿಸರ್ಗದ ಮೇಲೆ ಅವಲಂಬಿತವಾಗಿದೆ. ಆದರೆ, ಆಧುನೀಕರಣದ ಭರದಲ್ಲಿ ಅರಣ್ಯ ನಾಶ ಮಾಡಲಾಗುತ್ತಿದೆ ಎಂದು ಜಿ.ಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಡಾ.ಎ.ಚನ್ನಪ್ಪ ಹೇಳಿದರು.

ಮಂಗಳವಾರ ನಗರದ ಕುವೆಂಪು ಕನ್ನಡ ಭವನದಲ್ಲಿ ಪ್ರಾದೇಶಿಕ ಹಾಗೂ ಸಾಮಾಜಿಕ ಅರಣ್ಯ ವಿಭಾಗ ಮತ್ತು ಕೃಷಿ ಅರಣ್ಯ ರೈತರ ಹಾಗೂ ತಂತ್ರಜ್ಞಾನ ಸಂಸ್ಥೆ(ಐಎಎಫ್‌ಟಿ), ವನವಿಕಾಸ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ಕೃಷಿ ಅರಣ್ಯ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಅರಣ್ಯ ಉತ್ತೇಜಿಸುವುದರಿಂದ ಶುದ್ಧ ಗಾಳಿ, ನೀರು ಪಡೆಯಬಹುದು. ಮರಗಳನ್ನು ಕಡಿಯುವ ನೀತಿ-ನಿಯಮಗಳಿಗೆ ಬದಲಾವಣೆ ತಂದು ಕೃಷಿ ಅರಣ್ಯ ನೀತಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಬುಡಕಟ್ಟು ಜನರು ಸಂಸ್ಕೃತಿ ಹೆಸರಲ್ಲಿ ಅರಣ್ಯ ಕಾಪಾಡುತ್ತಿದ್ದಾರೆ ಎಂದು ತಿಳಿಸಿದರು.

ವಾಣಿಜ್ಯ ಬೆಳೆಗಳನ್ನು ಬೆಳೆದು ಭೂಮಿಯ ವಾತಾವರಣ ಹದಗೆಡಿಸಲಾಗುತ್ತಿದೆ. ಹೆಚ್ಚು ಇಳುವರಿ ಗಳಿಸಲು ಕೃಷಿಗೆ ಬಳಸುವ ರಾಸಾಯನಿಕಗಳಿಂದ ಮಣ್ಣಿನ ಫಲವತ್ತತೆ ನಾಶವಾಗುತ್ತಿದೆ. ನೈಸರ್ಗಿಕ ಕೃಷಿಯ ಕಡೆಗೆ ರೈತರು ಗಮನ ನೀಡಬೇಕು. ಗಿಡ-ಮರ ಕಡಿಮೆಯಾದಂತೆ ಮಳೆ ಪ್ರಮಾಣವು ಕಡಿಮೆಯಾಗಿ, ಕೃಷಿಯ ಮೇಲೆ ದುಷ್ಪರಿಣಾಮ ಬೀಳುತ್ತದೆ ಎಂದರು.

ಭಾರತವು 1980 ರಲ್ಲಿ ಆರಂಭಿಸಿದ 'ಹಸಿರು ಕ್ರಾಂತಿ' ಯಿಂದಾಗಿ ದೇಶದಲ್ಲಿ ಆಹಾರ ಕೊರತೆಯಿಲ್ಲ. ಜನ ಸಂಖ್ಯೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಉತ್ಪಾದಿಸಲಾಗುತ್ತಿದ್ದು, ಅವಶ್ಯಕತೆಗೆ ತಕ್ಕಷ್ಟು ಬಳಸಿಕೊಂಡು ಹೆಚ್ಚಿನ ಆಹಾರವನ್ನು ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಬಳ್ಳಾರಿ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ.ಹೀರಾಲಾಲ್ ಮಾತನಾಡಿ, ಜಿಲ್ಲೆಯಲ್ಲಿ 4 ರಿಂದ (7ನೇ ಪುಟಕ್ಕೆ)

## ಫೆಬ್ರವರಿಯಲ್ಲಿ 145 ವರ್ಷಗಳಲ್ಲೇ ಅತಿ ಹೆಚ್ಚಿನ ತಾಪಮಾನ ದಾಖಲು

ನವದೆಹಲಿ, ಫೆ. 28 – ಫೆಬ್ರವರಿಯಲ್ಲಿ ತಾಪಮಾನ 1877ರ ನಂತರ ಅತ್ಯಂತ ಹೆಚ್ಚಾಗಿತ್ತು. ಗರಿಷ್ಠ ಸರಾಸರಿ ತಾಪಮಾನ 29.54 ಡಿಗ್ರಿ ಸೆಲ್ಸಿಯಸ್ ಆಗಿತ್ತು ಎಂದು ಹವಾಮಾನ ಇಲಾಖೆ ತಿಳಿಸಿದೆ.

ದೇಶದ ಬಹುತೇಕ ಭಾಗಗಳಲ್ಲಿ ತಾಪಮಾನ ಸರಾಸರಿಗಿಂತ ಹೆಚ್ಚಾಗಿತ್ತು. ಆದರೆ, ದಕ್ಷಿಣ ಪ್ರಸ್ತಭೂಮಿ ಹಾಗೂ ಮಹಾರಾಷ್ಟ್ರದ ಕೆಲ ಭಾಗ ತೀವ್ರ ಬಿಸಿ ಪ್ರಕೋಪದಿಂದ ತಪ್ಪಿಸಿಕೊಳ್ಳಲಿವೆ ಎಂದು ಹವಾಮಾನ ಇಲಾಖೆ ಹೇಳಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಹವಾಮಾನ ಇಲಾಖೆಯ ಉನ್ನತ ಅಧಿಕಾರಿ ಎಸ್.ಸಿ. ಭಾನ್, ಮಾರ್ಚ್ ತಿಂಗಳಲ್ಲಿ ಬಿಸಿ ಗಾಳಿಗಳು ಬರುವ ಸಾಧ್ಯತೆ ಸ್ವಲ್ಪ ಮಟ್ಟಿಗೆ ಇದೆ. ಆದರೆ, ದೇಶದ ಬಹುತೇಕ ಭಾಗಗಳಲ್ಲಿ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಬಿಸಿಲು ತೀವ್ರವಾಗಿರಲಿದೆ (7ನೇ ಪುಟಕ್ಕೆ)

## 3ನೇ ಚತುರ್ಥದಲ್ಲಿ ಆರ್ಥಿಕತೆ ಶೇ.4.4ರಷ್ಟು

ನವದೆಹಲಿ, ಫೆ. 28 -ಉತ್ಪಾ ದನಾ ವಲಯದಲ್ಲಿ ದುರ್ಬಲ ಸಾಧನೆಯಿಂದಾಗಿ 2022-23ರ ಮೂರನೇ ಚತುರ್ಥದಲ್ಲಿ ಶೇ.4.4ರ ಆರ್ಥಿಕ ಬೆಳವಣಿಗೆಯಾಗಿದೆ. ಆದರೂ, ಒಟ್ಟಾರೆ ಈ ವರ್ಷದಲ್ಲಿ ಶೇ.7ರ ಬೆಳವಣಿಗೆಯಾಗಲಿದೆ ಎಂದು ರಾಷ್ಟ್ರೀಯ ಅಂಕಿ ಅಂಶಗಳ ಕಚೇರಿ ತಿಳಿಸಿದೆ.

2021-22ರಲ್ಲಿ ಶೇ.9.1ರ ಬೆಳವಣಿಗೆ ಆಗಿತ್ತು ಎಂದು ಈ ಹಿಂದೆ ಅಂದಾಜಿಸಲಾಗಿತ್ತು. ಅದನ್ನು ಈಗ ಶೇ.8.7ಕ್ಕೆ ಇಳಿಸಲಾಗಿದೆ.

## ಬ್ಯಾಂಕ್ ಠೇವಣಿ ಬಡ್ಡಿ ದರ ಶೇ.8ರ ಹಂತಕ್ಕೆ

ಮುಂಬೈ, ಫೆ. 28 - ಹಣದುಬ್ಬರ ಏರಿಕೆಯಾಗುತ್ತಿರುವಂತೆಯೇ, ಬ್ಯಾಂಕುಗಳಲ್ಲಿ ಇರಿಸಲಾಗುವ ಹಣದ ಠೇವಣಿ ದರವೂ ಹೆಚ್ಚಾಗುತ್ತಿದೆ. ಪಂಜಾಬ್ ಮತ್ತು ಸಿಂಧ್ ಬ್ಯಾಂಕ್‌ನ ವಾರ್ಷಿಕ ಠೇವಣಿ ಬಡ್ಡಿ ದರ ಈಗ ಶೇ.8ರಿಂದ 8.5ರವರೆಗೆ ತಲುಪಿದೆ.

ಬ್ಯಾಂಕುಗಳಲ್ಲಿ ಇರಿಸಲಾಗುವ ಠೇವಣಿಗಿಂತ, ಸಾಲದ ಬೇಡಿಕೆ ಹೆಚ್ಚಾಗಿದೆ. ಹೀಗಾಗಿ ಪ್ರಸಕ್ತ ಆರ್ಥಿಕ ವರ್ಷವಿಡೀ ಬಡ್ಡಿ ದರ ಹೆಚ್ಚಾಗುತ್ತಾ ಬಂದಿದೆ.

2022ರ ವರ್ಷದ ಹತ್ತು ತಿಂಗಳಲ್ಲಿ ಹಣದುಬ್ಬರ ದರ ಶೇ.6ಕ್ಕಿಂತ ಹೆಚ್ಚಾಗಿತ್ತು. ಹೀಗಾಗಿ ರಿಸರ್ವ್ ಬ್ಯಾಂಕ್ ಬಡ್ಡಿ ದರಗಳನ್ನು ಈ ವರ್ಷ 250 ಮೂಲ ಅಂಕಗಳಷ್ಟು ಹೆಚ್ಚಿಸಿ ಶೇ.6.50ಕ್ಕೆ ನಿಗದಿ ಪಡಿಸಿತ್ತು.

ಜನವರಿ ತಿಂಗಳಲ್ಲಿ ಬ್ಯಾಂಕುಗಳು ನೀಡುವ ಸಾಲದ ಪ್ರಮಾಣ ಶೇ.16.5ರಷ್ಟು ಹೆಚ್ಚಾಗಿದೆ. ಇದೇ ವೇಳೆ ಠೇವಣಿ ಹೆಚ್ಚಳ ಶೇ.10.6ರಷ್ಟು ಮಾತ್ರ ಇದೆ. ಇಡೀ ವರ್ಷದಲ್ಲಿ ಠೇವಣಿ ದರ ಹೆಚ್ಚಳ ಮಂದವಾಗಿತ್ತು. ಹೀಗಾಗಿ ಡಿಸೆಂಬರ್ ನಂತರದಲ್ಲಿ ಠೇವಣಿಗಳ ಬಡ್ಡಿ ದರದಲ್ಲಿ ಹೆಚ್ಚಳವಾಗುತ್ತಿದೆ.

ಅಲ್ಲದೇ, ಬ್ಯಾಂಕುಗಳು ಇದುವರೆಗೂ ಸಾಲದ ಮೇಲಿನ ಬಡ್ಡಿ ದರ ಹೆಚ್ಚಿಸಿದ್ದವೇ ಹೊರತು, ಠೇವಣಿಗಳ ಮೇಲಿನ ಬಡ್ಡಿ ದರ ಏರಿಕೆ ಮಾಡಿರಲಿಲ್ಲ. ಈಗ ಮಾರುಕಟ್ಟೆಗೆ ಅನುಗುಣವಾಗಿ ಠೇವಣಿಗಳ ಮೇಲಿನ ಬಡ್ಡಿ ದರ ಹೆಚ್ಚಾಗುತ್ತಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ 400 ದಿನಗಳ ಠೇವಣಿಗಳಿಗೆ ಶೇ.7.10ರ ಬಡ್ಡಿ ದರ ನೀಡುತ್ತಿದೆ. ಹಿರಿಯ ನಾಗರಿಕರಿಗೆ ಶೇ.7.60ರ ಬಡ್ಡಿ ಸಿಗುತ್ತಿದೆ.

ಪಂಜಾಬ್ ಮತ್ತು ಸಿಂಧ್ ಬ್ಯಾಂಕ್ ಅತಿ ಹೆಚ್ಚಿನ ಶೇ.8ರ ಬಡ್ಡಿ ದರ ನೀಡುತ್ತಿದೆ. ಇದು ಹಿರಿಯ ನಾಗರಿಕರಿಗೆ ಶೇ.8.50ರಷ್ಟಾಗಿದೆ.

## ಸಾಧನೆ.. ಸಾರ್ಥಕತೆ.. ಸಂಭ್ರಮ .. !

### ದಾವಿ ಘಟಿಕೋತ್ಸವದಲ್ಲಿ ರಾಜ್ಯಪಾಲರಿಂದ ಸ್ವರ್ಣ ಪದಕ ಸ್ವೀಕರಿಸಿದ ವಿದ್ಯಾರ್ಥಿಗಳು









ದಾವಣಗೆರೆ, ಫೆ. 28- ಕಷ್ಟಗಳ ನಡುವೆ ತೋರಿದ ಸಾಧನೆಯನ್ನು ಹೆತ್ತವರು ಸ್ನೇಹಿತರೊಂದಿಗೆ ಸಂಭ್ರಮಿಸುವ ಕ್ಷಣವದು.

ಅವರೆಲ್ಲಾ ಓದಿನಲ್ಲಿ ಶ್ರಮವಹಿಸಿ ಶೈಕ್ಷಣಿಕ ಸಾಧನೆ ಮಾಡಿದವರು. ಚಿನ್ನದ ಪದಕಕ್ಕೆ ಪಾತ್ರರಾದವರು. 5, 3, 2, 1 ಪದಕ ಪಡೆದ ಸಾಧಕರಿವರು.

ರಾಜ್ಯದ ರಾಜ್ಯಪಾಲರು ನೀಡಿದ ಚಿನ್ನದ ಪದಕಗಳನ್ನು ಕೊರಳಿಗೇರಿಸಿ ಸಂಭ್ರಮಿಸಿದರು. ಮಕ್ಕಳ ಸಾಧನೆ ನೋಡಲೆಂದೇ ಆಗಮಿಸಿದ್ದ ಪೋಷಕರಲ್ಲಿ ಸಂತಸ, ಸಾರ್ಥಕ ಭಾವ. ಪದಕ, ಪ್ರಮಾಣ ಪತ್ರಗಳನ್ನು ನೋಡಿ ಆನಂದಿಸಿದರು. ನಂತರ ಒಂದಿಷ್ಟು ಫೋಟೋ ಕ್ಲಿಕ್ಕಿಸಿಕೊಂಡರು.

ಸಾಧನೆಯ ಹಿಂದಿನ ದಾರಿಯನ್ನೊಮ್ಮೆ ನೆನೆದು ಈ ಸಂಭ್ರಮಕ್ಕೆ ಕಾರಣರಾದ, ಪ್ರೋತ್ಸಾಹಿಸಿದ ಹೆತ್ತವರು, ಪೋಷಕರು, ಗುರುಗಳನ್ನು ಸ್ಮರಿಸಿದ ಪದಕ ವಿಜೇತರು.

ಒಂದೆಡೆ ಚಿನ್ನದ ಹಕ್ಕಿಗಳ ಕಲರವ. ಮತ್ತೊಂದೆಡೆ ಪಿಹೆಚ್‌ಡಿ ಪದವಿ ಕನಸು ನನಸಾಗಿಸಿಕೊಂಡವರು ಸಂಭ್ರಮ,





ಇವರ ಮಧ್ಯೆ ತಮ್ಮ ಸಾಧನೆ, ಸೇವೆಯನ್ನು ಗುರುತಿಸಿ ವಿಶ್ವವಿದ್ಯಾಲಯಯಿಂದ ಗೌರವ ಡಾಕ್ಟರೇಟ್ ಸ್ವೀಕರಿಸಿದವರಲ್ಲಿ ಧನ್ಯತಾ ಭಾವ.

ಹೀಗೆ ಹಲವರ ಕನಸು, ಸಾಧನೆ, ಸಂಭ್ರಮಕ್ಕೆ ದಾವಣಗೆರೆ ವಿಶ್ವವಿದ್ಯಾನಿಲಯದ 10ನೇ ಘಟಿಕೋತ್ಸವ ಸಾಕ್ಷಿಯಾಗಿತ್ತು. ಘಟಿಕೋತ್ಸವದಲ್ಲಿ 32 ಮಹಿಳೆಯರು, 13 ಪುರುಷರು ಸೇರಿ 45 ವಿದ್ಯಾರ್ಥಿಗಳು 81 ಸ್ವರ್ಣದ ಪದಕಗಳನ್ನು ಹಂಚಿಕೊಂಡರು.

**ಅಜ್ಜಿಯ ಆಸರೆಯಲ್ಲಿ ಪಂಚ ಪದಕ:** ಮೂರು ವರ್ಷದವರಿದ್ದಾಗಲೇ ತಾಯಿಯನ್ನು ಕಳೆದುಕೊಂಡು ಅಜ್ಜಿಯ ಆಸರೆಯಲ್ಲಿ ಬೆಳೆದ ಹಾಲಮ್ಮ ಅತಿ ಹೆಚ್ಚು ಅಂದರೆ 5 ಚಿನ್ನದ ಪಕಗಳನ್ನು ಪಡೆದಿದ್ದರು. ಕಷ್ಟಪಟ್ಟರೆ ಅಸಾಧ್ಯ ಎನ್ನುವುದು ಯಾವುದೂ ಇಲ್ಲ ಎಂಬ ಸಂದೇಶ ನೀಡಿದರು.

ಚನ್ನಗಿರಿ ತಾಲ್ಲೂಕು ವೆಂಕಟೇಶ್ವರ ಕ್ಯಾಂಪ್‌ನಲ್ಲಿ ವಾಸಿಸುತ್ತಿರುವ ಇವರ ತಂದೆ ಬಸಪ್ಪ ಕೂಲಿ ಕಾರ್ಮಿಕ. ಅಜ್ಜಿ ಶಂಭಮ್ಮ ಅಂಗನವಾಡಿ ಸಹಾಯಕಿ. ಮೂರು ವರ್ಷವಿದ್ದಾಗಲೇ ತಾಯಿಯನ್ನು ಕಳೆದುಕೊಂಡು ಅಜ್ಜಿಯ ಆಸರೆಯಲ್ಲಿ ಬೆಳೆದ ಹಾಲಮ್ಮ ಹೇಳಿದ್ದಿಷ್ಟು. 'ನಾನು ಓದಿನ ಬಗ್ಗೆ ಏಕಾಗ್ರತೆ ವಹಿಸುತ್ತಿದ್ದೆ. ಪರೀಕ್ಷೆ ಒಂದು ತಿಂಗಳಿದ್ದಾಗ ಹೆಚ್ಚು ಶ್ರಮ ವಹಿಸುತ್ತಿದ್ದೆ. ಪಾಠಗಳ ಪುನಾವರ್ತನೆ ಮಾಡಿ ಕೊಳ್ಳುತ್ತಿದ್ದೆ ಇದು ಹೆಚ್ಚು ಅಂಕ ಪಡೆಯಲು ಸಹಕಾರಿಯಾಯಿತು.'

ಮುಂದೆ ಪಿಹೆಚ್‌ಡಿ ಪದವಿ ಪಡೆಯುವ ಆಸೆ ಇದೆ. ಉಪನ್ಯಾಸಕಿಯಾಗಬಯಸಿದ್ದೇನೆ ಎಂದು (7ನೇ ಪುಟಕ್ಕೆ)

## ಶ್ರೀ ರೇಣುಕಾಚಾರ್ಯ ಜಯಂತಿ ಮಾ.5 ಕ್ಕೆ ಆಚರಿಸಲು ಆದೇಶ



ಬಾಳೆಹೊನ್ನೂರು, ಫೆ. 28- ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವವನ್ನು ಪ್ರತಿ ವರ್ಷ ಮಾರ್ಚ್ 16 ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಆಚರಿಸುವಂತೆ ಕಳೆದ ವರ್ಷ ಮಾಡಿದ ಆದೇಶವನ್ನು ತಿದ್ದುಪಡಿ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯನ್ನು ಪ್ರತಿ ವರ್ಷ ಫಾಲ್ಗುಣ ಶುದ್ಧ ತ್ರಯೋದಶಿ ಯಂದು ಮಾರ್ಚ್ 5 ರಂದು ಆಚರಿಸುವಂತೆ ಸರ್ಕಾರ ಸೂಚಿಸಿದೆ ಎಂದು ಶ್ರೀ ಜಗದ್ಗುರು ರಂಭಾ ಪುರಿ ವೀರಸಿಂಹಾಸನ ಮಹಾ ಸಂಸ್ಥಾನ ಪೀಠದ ವಾರ್ತಾ ಸಂಯೋಜನಾಧಿಕಾರಿ ಸಿ.ಎಚ್. ಬಾಳನಗೌಡ್ರ ತಿಳಿಸಿದ್ದಾರೆ.

## ಚಂದ್ರಯಾನ : ಇಂಜಿನ್ ಪರೀಕ್ಷೆ ಯಶಸ್ವಿ

ಬೆಂಗಳೂರು, ಫೆ. 28 - ಮೂರನೇ ಚಂದ್ರಯಾನಕ್ಕೆ ಬಳಸಲಾಗುವ ಕ್ರಯೋಜನಿಕ್ ಇಂಜಿನ್ ಸಿಇ-20 ತಾಪದ ಪರೀಕ್ಷೆ ಯಶಸ್ವಿಯಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ತಿಳಿಸಿದೆ. ತಮಿಳುನಾಡಿನ ಮಹೇಂದ್ರಗಿರಿಯಲ್ಲಿರುವ ಇಸ್ರೋ ಕೇಂದ್ರದಲ್ಲಿ ಫೆಬ್ರವರಿ 24ರಂದು ಪರೀಕ್ಷೆ ನಡೆಸಲಾಗಿತ್ತು. ಇದು ಚಂದ್ರಯಾನ - 3 ಉಡಾವಣೆಯಲ್ಲಿ ಮಹತ್ವದ ಪಾತ್ರ ವಹಿಸಲಿದೆ.

## ನಗರದಲ್ಲಿ ಇಂದು ಭೋಳಚಟ್ಟಿ ಶ್ರೀ ಚೌಡೇಶ್ವರಿ ದೇವಿ ಜಾತ್ರೆ



ಹಿಂದೂ ರುದ್ರಭೂಮಿ ಬಳಿ ಇರುವ ಭೋಳಚಟ್ಟಿ ಶ್ರೀ ಚೌಡೇಶ್ವರಿ ದೇವಿ ಹಾಗೂ ಶ್ರೀ ಕಾಲಭೈರವ ದೇವಸ್ಥಾನದಲ್ಲಿ ಇಂದಿನಿಂದ ಮಾರ್ಚ್ 3 ರವರೆಗೆ ಜಾತ್ರಾ ಮಹೋತ್ಸವ ಜರುಗಲಿವೆ.

ಇಂದು ಶ್ರೀ ಚೌಡೇಶ್ವರಿ ದೇವಿಗೆ ಹರಕೆ, ಮುಡುಪುಗಳನ್ನು ಒಪ್ಪಿಸುವ ಕಾರ್ಯಕ್ರಮ ಜರುಗುವುದು.

ದಿನಾಂಕ 3ನೇ ಶುಕ್ರವಾರ ಶ್ರೀ ಚೌಡೇಶ್ವರಿ ದೇವಿಗೆ ಬುತ್ತಿ ಪೂಜೆ ಹಾಗೂ ಸಂಜೆ ಚೌಡೇಶ್ವರಿ ದೇವಿಯ ಪಲ್ಲಕ್ಕಿ ಉತ್ಸವ ನೆರವೇರುವುದು.

ಮಧ್ಯಾಹ್ನ 12 ಗಂಟೆಯಿಂದ ಅನ್ನ ಸಂತರ್ಪಣೆ ಕಾರ್ಯಕ್ರಮ ಜರುಗಲಿದೆ ಎಂದು ದೇವಸ್ಥಾನ ಸೇವಾ ಸಮಿತಿ ಕಾರ್ಯದರ್ಶಿ ಕೆ. ಸಂತೋಷ್‌ಕುಮಾರ್ ತಿಳಿಸಿದ್ದಾರೆ.

## ರಾಣೇಬೆನ್ನೂರಿನಲ್ಲಿ ನಿಜಗುಣಾನಂದ ಶ್ರೀಗಳ ವಿಶ್ವಧರ್ಮ ಪ್ರವಚನ



ರಾಣೇಬೆನ್ನೂರು, ಫೆ.28- ಮುಂಡರಗಿ ತೋಂಟದಾರ್ಯ ಮಠ, ಬೈಲೂರ ನಿಷ್ಕಲ ಮಂಟಪದ ಶ್ರೀ ನಿಜಗುಣಾನಂದ ಸ್ವಾಮೀಜಿ ಅವರಿಂದ ರಾಣೇಬೆನ್ನೂರು ನಗರದಲ್ಲಿ ಮಾರ್ಚ್ 15 ರಿಂದ ಬರುವ ಏಪ್ರಿಲ್ 5 ವರೆಗೆ 21 ದಿನಗಳ ಕಾಲ ವಿಶ್ವ ಧರ್ಮ ಪ್ರವಚನದಲ್ಲಿ ಅಕ್ಕನ ದಿವ್ಯ ದರ್ಶನ ಕಾರ್ಯಕ್ರಮ ನಡೆಯಲಿದೆ.




ಹೃದಯಪೂರ್ವಕ ಅಭಿನಂದನೆಗಳು

ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಪ್ರತಿಷ್ಠಿತ
'ಗೌರವ ಡಾಕ್ಟರೇಟ್'
ಪದವಿ ಪುರಸ್ಕಾರಕ್ಕೆ ಭಾಜನರಾಗಿರುವ
ಅಖಿಲ ಭಾರತ ವೀರಶೈವ - ಲಿಂಗಾಯಿತ ಮಹಾಸಭಾದ
ರಾಷ್ಟ್ರೀಯ ಉಪಾಧ್ಯಕ್ಷರೂ,
ಹೆಸರಾಂತ ಲೆಕ್ಕ ಪರಿಶೋಧಕರೂ,
ಕೈಗಾರಿಕೋದ್ಯಮಿಗಳೂ, ನಮ್ಮ ಆತ್ಮೀಯರೂ ಆದ

ಶ್ರೀ ಅಥಣಿ ಎಸ್. ವೀರಣ್ಣ

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.
ಶ್ರೀಯುತರಿಗೆ ಆಯುರಾರೋಗ್ಯ,
ಉನ್ನತ ಸ್ಥಾನ ಮಾನಗಳು ಲಭಿಸಲಿ
ಎಂದು ಭಗವಂತನಲ್ಲಿ ಪ್ರಾರ್ಥನೆ.

✦ ಕೋಗುಂಡಿ ಬಕ್ಕಣ್ಣ ✦ ಅಜ್ಜಂಪುರ ಶೆಟ್ರು ಶಂಭಣ್ಣ
✦ ದೇವರಮನಿ ಶಿವಕುಮಾರ್ ಮತ್ತು ಸಹೋದರರು ✦ ಟಿ.ಎಸ್. ಜಯರುದ್ರೇಶ್
✦ ರೋಣದ ಮಹೇಶ್ ✦ ಬೇತೂರು ತಿಪ್ಪೇಶ್ ಮತ್ತು ಸಹೋದರರು, ಶ್ರೀ ವಿನಾಯಕ ಸ್ವೀಟ್ಸ್
✦ ಎತ್ತಿನಹಳ್ಳಿ ರುದ್ರೇಶ್, ಶ್ರೀ ನಿರಂಜನ ಎಂಟರ್‌ಪ್ರೈಸಸ್ ✦ ಕೋರಿ ಹಿರಿಯಣ್ಣ ಮತ್ತು ಮಕ್ಕಳು, ಅಕ್ಕಿ ವರ್ತಕರು
✦ ಟಿ.ಜೆ. ಸುರೇಶ್ ಮತ್ತು ಸಹೋದರರು ✦ ಹಾಸಬಾವಿ ಕರಿಬಸಪ್ಪ
✦ ಆಲದಹಳ್ಳಿ ಶಿವಕುಮಾರ್ ✦ ಅಜ್ಜಂಪುರ ಶೆಟ್ರು ಓಂಕಾರಪ್ಪ ✦ ಜಿತೇಂದ್ರ
✦ ಅಜ್ಜಂಪುರ ಶೆಟ್ರು ಮೃತ್ಯುಂಜಯ ✦ ಅಜ್ಜಂಪುರ ಶೆಟ್ರು ಸಿದ್ದರಾಮಣ್ಣ
✦ ಬೆಳಗಾವಿ ಬಸವರಾಜ್, ಆಡಿಟರ್ ✦ ಅಜ್ಜಂಪುರ ಶೆಟ್ರು ವಿಜಯಕುಮಾರ್
✦ ಶಂಭುಲಿಂಗಪ್ಪ, ನೆಗಳೂರು ✦ ಗಾಂಜಿ ಸುರೇಶ್ ✦ ಶಂಭು ಎಸ್. ಉರೇಕೊಂಡಿ
✦ ಶರಣಾರ್ಥಿ ಬಸವರಾಜಪ್ಪ ✦ ವಾಲಿ ಲಿಂಗರಾಜ್ ✦ ಹೆಚ್. ಆರ್. ಸಿದ್ದಲಿಂಗೇಶ್
✦ ಎನ್.ಕೆ. ಬಸಲಿಂಗಪ್ಪ (ಈರುಳ್ಳಿ) ✦ ಬಾಳೆಕಾಯಿ ಮುರುಗೇಶ್ ✦ ಎ.ಬಿ. ಪ್ರತಾಪ್





SPARSH HOSPITAL
THE TOUCH OF LIFE

ನಿಮ್ಮ ಕಾಲುಗಳ ಮೇಲಿನ ಕಾಳಜಿ ಕಡಿಮೆಯಾಗದಿರಲ್ಲಿ
ಸ್ಪರ್ಶ್ ಆಸ್ಪತ್ರೆ
ಉಬ್ಬಿರುವ ರಕ್ತನಾಳಗಳ ಚಿಕಿತ್ಸಾ ಕ್ಲಿನಿಕ್

ಡಾ.ಭಾಸ್ಕರ್ ಎಂ.ವಿ
MD (RD), DNB(RD), DM(NIR), FRCR(UK), MNAMS
ವಿಶೇಷತೆಗಳು – ನರವಿಜ್ಞಾನ ವಿಕಿರಣಶಾಸ್ತ್ರ

ಈ ಕ್ಲಿನಿಕ್‌ಗೆ ಯಾರು ಭೇಟಿ ನೀಡಬಹುದು?
ಕಾಲಿನಲ್ಲಿ ನೋವು । ರಕ್ತನಾಳದ ಊತ ಕಾಣಿಸಿಕೊಂಡಲ್ಲಿ । ಕಪ್ಪು ಚುಕ್ಕೆಗಳು । ತುರಿಕೆ ।
ವಾಸಿಯಾಗದ ನರದ ಹುಣ್ಣು । ಆಯಾಸ ಮತ್ತು ಹೆಚ್ಚಿನ ತೂಕವಿದ್ದವರು

ಎಂಡೋವ್ಯಾಸ್ಕುಲಾರ್ ವೈದ್ಯರೊಂದಿಗೆ ಸಮಾಲೋಚನೆ ₹ 300/-*

2ನೇ ಮಾರ್ಚ್ 2023 ಪ್ರತಿ ತಿಂಗಳು 1ನೇ ಗುರುವಾರ ಲಭ್ಯವಿದೆ
ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್,
ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ – 577 002
ನೋಂದಣಿಗಾಗಿ ಕರೆಮಾಡಿ: +91 99800 33277
*T & C Apply



ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಪ್ರತಿಷ್ಠಿತ
'ಗೌರವ ಡಾಕ್ಟರೇಟ್' ಪದವಿ ಪುರಸ್ಕಾರಕ್ಕೆ ಭಾಜನರಾಗಿರುವ
ದಾವಣಗೆರೆ ಸಿಎ ಅಸೋಸಿಯೇಷನ್ನಿನ ಗೌರವಾಧ್ಯಕ್ಷರಾಗಿರುವ
ಹೆಸರಾಂತ ಲೆಕ್ಕ ಪರಿಶೋಧಕರೂ, ಕೈಗಾರಿಕೋದ್ಯಮಿಗಳೂ, ನಮ್ಮ ಆತ್ಮೀಯರೂ ಆದ

ಶ್ರೀ ಅಥಣಿ ಎಸ್. ವೀರಣ್ಣ


ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರುಗಳು
ದಾವಣಗೆರೆ CA ಅಸೋಸಿಯೇಷನ್



ಹೃದಯಪೂರ್ವಕ ಅಭಿನಂದನೆಗಳು





ದಾವಣಗೆರೆ ವಿಶ್ವವಿದ್ಯಾಲಯದ
10ನೇ ಘಟಿಕೋತ್ಸವ ಸಮಾರಂಭದಲ್ಲಿ
'ಗೌರವ ಡಾಕ್ಟರೇಟ್'
ಪದವಿ ಸ್ವೀಕರಿಸಿದ
ಅಖಿಲ ಭಾರತ ವೀರಶೈವ - ಲಿಂಗಾಯಿತ
ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷರೂ,
ಬಾಪೂಜಿ ಎಂಬಿಎ ಕಾಲೇಜಿನ ಅಧ್ಯಕ್ಷರೂ,
ಹೆಸರಾಂತ ಲೆಕ್ಕ ಪರಿಶೋಧಕರೂ,
ಕೈಗಾರಿಕೋದ್ಯಮಿಗಳೂ, ಹಿರಿಯರೂ
ನಮ್ಮ ಮಾರ್ಗದರ್ಶಕರೂ ಆದ

ಡಾ. ಅಥಣಿ ಎಸ್. ವೀರಣ್ಣ

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

ಶಿಕ್ಷಣ, ಸಮಾಜ ಸೇವೆ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿನ
ಕಾರ್ಯದಕ್ಷತೆ ಅವರ ಜನಪರ ಕಾಳಜಿಗೆ ಸಂದ ಗೌರವವಾಗಿದೆ.
ಅವರಿಗೆ ಇನ್ನಷ್ಟು ಜನ ಸೇವೆ
ಮಾಡಲು ಆಯುರಾರೋಗ್ಯ, ಯಶಸ್ಸು ಕೊಟ್ಟು
ಕಾಪಾಡಲಿ ಎಂದು ಭಗವಂತನಲ್ಲಿ ಪ್ರಾರ್ಥನೆ.



ಶಂಭು ಎಸ್. ಉರೇಕೊಂಡಿ

ಅಧ್ಯಕ್ಷರು, ಅಖಿಲ ಭಾರತ ವೀರಶೈವ - ಲಿಂಗಾಯತ ಮಹಾಸಭಾ,
ಜಿಲ್ಲಾ ಯುವ ಘಟಕ, ದಾವಣಗೆರೆ.
ಮಾಜಿ ಅಧ್ಯಕ್ಷರು, ಯುವ ಕಾಂಗ್ರೆಸ್ ನಗರ ಘಟಕ, ದಾವಣಗೆರೆ.
ಮೊಬೈಲ್ : 98860-04771

INTERIOR HIVE
Designs That Impress

atom furniture



ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವ
ಸಮಾರಂಭದಲ್ಲಿ ಕರ್ನಾಟಕ ರಾಜ್ಯದ ಘನತೆವೆತ್ತ
ರಾಜ್ಯಪಾಲರು ಮತ್ತು ದಾವಣಗೆರೆ ವಿಶ್ವವಿದ್ಯಾನಿಲಯದ
ಕುಲಾಧಿಪತಿಗಳೂ ಆದ
ಸನ್ಮಾನ್ಯ ಶ್ರೀ ಥಾವರ್ ಚಂದ್ ಗೆಹ್ಲೋಟ್
ಇವರಿಂದ
'ಗೌರವ ಡಾಕ್ಟರೇಟ್'
ಪದವಿ ಸ್ವೀಕರಿಸಿದ
ನಮ್ಮ ಸಂಸ್ಥೆಗಳ ಛೇರ್ಮನ್ ಹಾಗೂ
ಖ್ಯಾತ ಲೆಕ್ಕ ಪರಿಶೋಧಕರೂ,
ಕೈಗಾರಿಕೋದ್ಯಮಿಗಳೂ ಆದ

ಶ್ರೀ ಅಥಣಿ ಎಸ್. ವೀರಣ್ಣ

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.
ಶಿಕ್ಷಣ, ಸಮಾಜ ಸೇವೆ ಹಾಗೂ
ಕೈಗಾರಿಕಾ ಕ್ಷೇತ್ರಗಳಲ್ಲಿನ ಕಾರ್ಯದಕ್ಷತೆ ಅವರ
ಜನಪರ ಕಾಳಜಿಗೆ ಸಂದ ಗೌರವವಾಗಿದೆ.

ಭಗವಂತನು ಅವರಿಗೆ ಇನ್ನಷ್ಟು ಜನ ಸೇವೆ ಮಾಡಲು ಆಯುರಾರೋಗ್ಯ,
ಯಶಸ್ಸು ಕೊಟ್ಟು ಕಾಪಾಡಲಿ ಎಂದು ಹಾರೈಸುತ್ತೇವೆ.

✦ ಆರ್. ಮಂಜುನಾಥ್ ✦ ಎ.ಕೆ. ಪ್ರಶಾಂತ್
✦ ಕೆ.ವಿ. ಪ್ರಭಾಕರ್ ✦ ಎ.ಕೆ. ಚನ್ನಪ್ಪ
✦ ಎ.ವಿ. ಪ್ರಸಾದ್ ✦ ಸಾವನ್ ವೈ. ಅಂಬರ್‌ಕರ್
ಆಡಳಿತ ವರ್ಗದವರು, ಸಿಬ್ಬಂದಿ ವರ್ಗದವರು ಹಾಗೂ ಕಾರ್ಮಿಕರು

ಶ್ರೀ ಆಂಜನೇಯ ಕಾಟನ್ ಮಿಲ್ಸ್ ಪ್ರೈವೇಟ್ ಲಿಮಿಟೆಡ್
ಶ್ರೀ ಗಣೇಶರ್ ಟೆಕ್ಸ್‌ಟೈಲ್ ಮಿಲ್ಸ್ ಲಿಮಿಟೆಡ್
ದಾವಣಗೆರೆ.

# ಸಾಧನೆ.. ಸಾರ್ಥಕತೆ.. ಸಂಭ್ರಮ... !

**(1ನೇ ಪುಟದಿಂದ)** ಹಾಲಮ್ಮ ಹೇಳಿದರು. ಅಂದಹಾಗೆ ಮೊಮ್ಮಗಳು ಪದಕ ಪಡೆಯುವ ದಿನದಂದೇ ಅಜ್ಜಿಯ ಕೆಲಸದ ನಿವೃತ್ತಿಯ ದಿನವೂ ಆಗಿತ್ತು.

**ಐದು ಪದಕ ಪಡೆದ ಅರುಣ್ :** ಐದು ಸ್ವರ್ಣದ ಪದಕ ಪಡೆದ ಮತ್ತೊರ್ವ ಸಾಧಕ ಕೆ.ಅರುಣ್ ಶರ್ಮ. ಬಿಎಸ್ಸಿ ಬಯೋ ಕೆಮಿಸ್ಟ್ರಿಯಲ್ಲಿ ಪಡೆದ ತನ್ನ ಐದೂ ಪದಕಗಳು ಹೆತ್ತವರು ಹಾಗೂ ಅಧ್ಯಾಪಕ ವೃಂದಕ್ಕೆ ಸಮರ್ಪಿಸುವುದಾಗಿ ಹೇಳಿದ ಇವರಿಗೆ ಪಿಹೆಚ್‌ಡಿ ಮಾಡಿ, ಸಂಶೋಧಕನಾಗುವ ಆಸೆ. ಮೂರು ಪದಕ ನಿರೀಕ್ಷಿಸಿದ್ದೆ. ಐದು ಬಂದಿರುವುದು ಖುಷಿ ನೀಡಿದೆ ಎಂದು ಸಂತಸ ಹಂಚಿಕೊಂಡರು.

**ಧನುಗೆ ಸಂಶೋಧಕಿಯಾಗುವ ಕನಸು:** ಬಯೋಟೆಕ್ನಾಲಜಿಯಲ್ಲಿ ರ್‍ಯಾಂಕ್ ಪಡೆದು ಚಿನ್ನದ ಪದಕ ಪಡೆದ ಧನು ಎ.ಎಸ್, ಚನ್ನಗಿರಿ ತಾಲ್ಲೂಕಿನ ನಾಗಶೆಟ್ಟಿಹಳ್ಳಿಯವರು. ಈಗಾಗಲೇ ಪಿಹೆಚ್‌ಡಿಗೆ ಜಾಯಿನ್ ಆಗಿದ್ದೇನೆ. ರಿಸರ್ಚ್ ಮಾಡಬೇಕಿದೆ. ಸಂಶೋಧಕಿಯಾಗುವ ಕನಸಿದೆ ಎಂದರು.

ಪ್ರೊಫೆಸರ್ ಆಗುವ ಕನಸಿನ ಜ್ಯೋತಿ: ಎಂ.ಎಸ್ಸಿ ಭೌತ ವಿಜ್ಞಾನ ವಿಷಯದಲ್ಲಿ 2 ಪದಕ ಪಡೆದವರು ಜ್ಯೋತಿ ಎಸ್., ಮುಂದೆ ಪ್ರೊಫೆಸರ್ ಆಗಿ ಒಳ್ಳೆಯ ಎಜುಕೇಷನ್ ಕೊಡಬೇಕು ಎಂದುಕೊಂಡಿದ್ದೇನೆ. ಎಲ್ಲರೂ ಭೌತಶಾಸ್ತ್ರ ಇಷ್ಟಪಡುವ ಹಾಗೆ ಮಾಡುತ್ತೇನೆ ಎಂದು ಹೇಳಿರು ಜ್ಯೋತಿ.

ಅಪ್ಪ ಕೂಲಿ ಕೆಲಸ ಮಾಡುತ್ತಾರೆ. ಆವತ್ತಿನ ಪಾಠ ಅವತ್ತೇ ಓದಿ ಮುಗಿಸುತ್ತಿದ್ದೆ ಹೆಚ್ಚು ಒತ್ತಡಕ್ಕೆ ಒಳಗಾಗುತ್ತಿರಲಿಲ್ಲ ಎಂದು ಹೇಳಿದರು.

**ನವೋದ್ಯಮ ಆರಂಭಿಸುವ ಆಸೆಯ ಛಾಯಾ:** ತಂದೆ ಮೂರ್ತಪ್ಪ ತಾಯಿ ವಿನೋದ. ಮಾಯಕೊಂಡದಲ್ಲಿ ಒಂದು ಎಕರೆ ಹೊಲ ಇದೆ. ಮೂವರು ಹೆಣ್ಣು ಮಕ್ಕಳು. ಎಂಬಿಎನಲ್ಲಿ ಚಿನ್ನದ ಪದಕ ಪಡೆದಿದ್ದೇನೆ ಎಂದವರು ಛಾಯಾ. ಸ್ಟಾರ್ಟ್ ಅಪ್ ಕಂಪನಿ ಮಾಡಬೇಕೆಂದಿದ್ದೇನೆ. ಗೋಲ್ಡ್ ಮೆಡಲ್ ಪಡೆಯುವ ಹಂಬಲ ಇಟ್ಟುಕೊಂಡೇ ಓದಿದೆ. ಪೋಷಕರು ಕಷ್ಟದಲ್ಲೂ ಸಹಕರಿಸಿದರು. ಖುಷಿಯಾಗಿದೆ ಎಂದರು ಛಾಯಾ.

**ನಿರೀಕ್ಷೆ ಇರದಿದ್ದರೂ ಒಲಿದ ಪದಕ:** ಸಯಿದಾ ಮುಸ್ಕಾನ್ ಉನ್ನೀಸಾ ಎಂ.ಕಾಂ ಪದವಿಯಲ್ಲಿ ಮೊದಲ ರ್‍ಯಾಂಕ್ ಪಡೆದು, ಬಂಗಾರದ ಪದಕ ಪಡೆದಿದ್ದರು. ಹರಿಹರದ ಇವರು, ಎಸ್‌ಜೆವಿಪಿ ಕಾಲೇಜಿನಲ್ಲಿ ಓದಿದ್ದರು. ತಂದೆ ಬಿರ್ಲಾ ಫ್ಯಾಕ್ಟರಿ ನಿವೃತ್ತ ಕಾರ್ಮಿಕ, ತಾಯಿಗೃಹಿಣಿ,

ನಾನು ರ್‍ಯಾಂಕ್ ನಿರೀಕ್ಷಿಸಿರಲಿಲ್ಲ. ಆದರೆ ಕಷ್ಟ ಪಟ್ಟು ಓದುತ್ತಿದ್ದೆ. ಅದಕ್ಕೆ ಫಲ ಸಿಕ್ಕಿದೆ. ಖುಷಿಯಾಗಿದೆ. ಸದ್ಯ ಚಾರ್ಟಡ್ ಅಕೌಂಟ್ ಓದುತ್ತಿದ್ದೇನೆ ಎಂದರು.

ಹೀಗೆ ಹಲವಾರು ಕನಸುಗಳನ್ನು ಹೊತ್ತು ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು ಪತ್ರಿಕೆಯೊಂದಿಗೆ ತಮ್ಮ ಸಂತಸ ಹಂಚಿಕೊಂಡರು.

# ಇಂದಿನ ವಿಜ್ಞಾನವೇ ನಾಳಿನ ತಂತ್ರಜ್ಞಾನ : ಡಾ. ಮಂಜಪ್ಪ

ದಾವಣಗೆರೆ, ಫೆ. 28- 1979 ರಲ್ಲಿ ಆರಂಭಗೊಂಡ ಈ ಸಂಸ್ಥೆ ಇಂದು ಬಹಳ ಎತ್ತರಕ್ಕೆ ಬೆಳೆದು ಜ್ಞಾನ, ವಿಜ್ಞಾನ, ತಂತ್ರಜ್ಞಾನ ಬಾಹುಳ್ಯವನ್ನ ಹೆಚ್ಚಿಸುತ್ತಾ ಬಂದಿದೆ. ಇಂದಿನ ವಿಜ್ಞಾನವೇ ನಾಳಿನ ತಂತ್ರಜ್ಞಾನ ಎಂಬುದನ್ನು ನಾವ್ಯಾರೂ ಮರೆಯುವಂತಿಲ್ಲ ಎಂದು ಮಂಗಳೂರಿನ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ನಿರ್ದೇಶಕ (ರಿಸರ್ಚ್ ಅಂಡ್ ಕನ್ಸಲ್ಟೆನ್ಸಿ) ಡಾ.ಎಸ್. ಮಂಜಪ್ಪ ಹೇಳಿದರು.



ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ವತಿಯಿಂದ ಕಾಲೇಜಿನ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಇಂದು ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಇವೆರಡೂ ಜೊತೆ ಜೊತೆಯಾಗಿಯೇ ಸಾಗುತ್ತವೆ. ಇವೆರಡೂ ರೈಲ್ವೆ ಟ್ರ್ಯಾಕ್ ಇದ್ದಂತೆ. ಎರಡೂ ಪ್ರತ್ಯೇಕವಾಗಲು ಸಾಧ್ಯವಿಲ್ಲ. ಜೀವನ ಶೈಲಿ ಇವೆರಡರ ಸಮಾಗಮದಿಂದ ಹೊರ ಹೊಮ್ಮಿದ ಒಂದು ಜ್ಞಾನ. ನಮ್ಮ ಜೀವನದ ಅಗತ್ಯಗಳು, ಸೌಲಭ್ಯಗಳು, ಆಹಾರ ಭದ್ರತೆ, ಆರೋಗ್ಯ ಭದ್ರತೆ ಪೂರೈಕೆಯಾಗುವುದು ವಿಜ್ಞಾನ ಮತ್ತು ತಂತ್ರಜ್ಞಾನದಿಂದಾಗಿ ಎಂಬುದನ್ನು ಮರೆಯುವಂತಿಲ್ಲ ಎಂದರು.

ಭಾರತದ ಸಾಫ್ಟವೇರ್ ತಂತ್ರಜ್ಞಾನದ, ಉತ್ಪಾದನಾ ವಲಯದ ತಂತ್ರಜ್ಞರು ಪ್ರಪಂಚದ ಅಗ್ರಶ್ರೇಣಿಯ ಕಂಪನಿಗಳ ಸಿಇಓಗಳಾಗಿದ್ದಾರೆ. ಕೌಶಲ್ಯದಿಂದ ಮೆಚ್ಚಗೆಗೆ ಪಾತ್ರರಾಗಿದ್ದಾರೆ. ತಂತ್ರಜ್ಞಾನ ಮಾನವನ ಜೀವನವನ್ನು ಸರಳ, ಸುಲಭಗೊಳಿಸುತ್ತದೆ. ಸಮಾಜದ ಬೆಳವಣಿಗೆಗೆ ಕೌಶಲ್ಯ ತಂತ್ರಜ್ಞಾನ ಇಂದಿನ ಅಗತ್ಯವಾಗಿದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಮಾತನಾಡಿ, ವೈದ್ಯಕೀಯ ವಿಜ್ಞಾನದಲ್ಲಿ ನಾವುಗಳು ತಿಳಿದಂತೆ ವಿಜ್ಞಾನಿಗಳು ಮಾಡಿದ ಆವಿಷ್ಕಾರದಿಂದ ಸಿಡುಬು, ಪೋಲಿಯೋ ಸೇರಿದಂತೆ ಅನೇಕ ಜಗತ್ತಿನ ಮಾರಕ ರೋಗಗಳು ಕಡಿಮೆಯಾಗುತ್ತಿವೆ. ಇಂದು ಈ ರೋಗಗಳು ಜಗತ್ತಿನಿಂದ ಬಹುತೇಕ ಕಣ್ಮರೆಯಾಗುತ್ತಿವೆ. 1965 ರ ಸಂದರ್ಭದಲ್ಲಿ ಭಾರತ ಆಹಾರದ ಸಮಸ್ಯೆ ಎದುರಿಸುತ್ತಿದ್ದ ಸಂದರ್ಭದಲ್ಲಿ ಮತ್ತು ಆಹಾರದ ಕೊರತೆಯಿಂದಾಗಿ ಜನರು ಸಾಯುತ್ತಿದ್ದರು. ಗೋಡ್ಲಾ ಮತ್ತು ಭಾರತದ ಸ್ವಾಮಿನಾಥ್ ಎಂಬ ವಿಜ್ಞಾನಿಗಳು ಗೋಧಿ ಮತ್ತು ಭತ್ತವನ್ನು ಅಭಿವೃದ್ಧಿಪಡಿಸಿದರು. ಆಹಾರದಲ್ಲಿ ಸ್ವಾವಲಂಬಿಯಾಗುವ ಮೂಲಕ ಭಾರತ ವಿದೇಶಗಳಿಗೆ ರಫ್ತು ಮಾಡುವಷ್ಟು ಬೆಳೆದಿದೆ. ಇದು ವಿಜ್ಞಾನದ ಕೊಡುಗೆಯಾಗಿದೆ ಎಂದರು.

ಬಿಐಇಟಿ ಕಾಲೇಜಿನ ಪ್ರಾಚಾರ್ಯ ಡಾ. ಹೆಚ್.ಬಿ. ಅರವಿಂದ್ ಮಾತನಾಡಿ, ಇಂದು ಬಹುಮುಖ್ಯವಾಗಿ ತಿಳಿಯಬೇಕಾದದು ಭಾರತದ ವಿಜ್ಞಾನಿಗಳ ಸಾಧನೆ. ಗೆಲಿಲಿಯೋ ವಿಜ್ಞಾನಿಗಳ ಪಿತಾಮಹಾ, ವಿಜ್ಞಾನ ಮತ್ತು ತಂತ್ರಜ್ಞಾನ ಸದಾ ಜೊತೆ ಜೊತೆಯಲ್ಲೇ ಸಾಗುತ್ತವೆ ಎಂದರು.

ಇಂದಿನ ದಿನಗಳಲ್ಲಿ ತಂತ್ರಜ್ಞಾನ ಬೆಳೆದಂತೆಲ್ಲಾ ನಮ್ಮ ಮಾನವೀಯ ಮೌಲ್ಯಗಳು ಕಡಿಮೆಯಾಗುತ್ತಿರುವುದು ವಿಷಾದದ ಸಂಗತಿ ಎಂದು ವಿಷಾದಿಸಿದರು.

ವೇದಿಕೆಯಲ್ಲಿ ಪ್ರಾಧ್ಯಾಪಕರಾದ ಪ್ರೊ. ಕೆ.ಎಸ್. ಬಸವರಾಜಪ್ಪ, ಪ್ರೊ. ಹೆಚ್.ಆರ್. ಮಲ್ಲಿಕಾರ್ಜುನ್, ಪ್ರೊ.ಟಿ.ಎಸ್. ಕೃಷ್ಣ ಕುಮಾರ್, ಪ್ರೊ. ಸದಾಶಿವಪ್ಪ ಉಪಸ್ಥಿತರಿದ್ದರು.

ಬಿ.ಎಸ್. ಪುಣ್ಯಶ್ರೀ ಪ್ರಾರ್ಥಿಸಿದರು. ಎನ್. ಹೆಚ್. ಸಂಜನಾ ಸ್ವಾಗತಿಸಿದರು. ಎಸ್.ಎಂ. ಸಾಕ್ಷಿ ರಾಷ್ಟ್ರೀಯ ವಿಜ್ಞಾನ ದಿನದ ಮಹತ್ವ ತಿಳಿಸಿಕೊಟ್ಟರು. ರಘುನಂದನ ಪಿ. ರಾವ್ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಜಿ.ಬಿ. ಅಕ್ಷತಾ ಬಹುಮಾನ ವಿತರಣೆಯ ಕಾರ್ಯವನ್ನು ನಿರ್ವಹಿಸಿದರು. ಚೇತನರಾಜ್ ಜಕನೂರು ವಂದಿಸಿದರು.

# ರಾಸಾಯನಿಕಗಳಿಂದ ಮಣ್ಣಿನ ಫಲವತ್ತತೆ ನಾಶ

**(1ನೇ ಪುಟದಿಂದ)** 5 ಲಕ್ಷ ಸಸಿಗಳನ್ನು ನರೇಗಾ ಒಳಗೊಂಡಂತೆ ವಿವಿಧ ಯೋಜನೆಗಳಡಿ ವಿತರಿಸಲಾಗಿದ್ದು, 1200 ಹೇಕ್ಟೆರ್ ಪ್ರದೇಶವನ್ನ ಅರಣ್ಯ ಕೃಷಿ ಭೂಮಿಯಾಗಿ ಪರಿವರ್ತಿಸಲಾಗಿದೆ ಎಂದು ಮಾಹಿತಿ ನೀಡಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್.ಹೆಚ್. ಜಗನ್ನಾಥ ಪ್ರಾಸ್ತಾವಿಕವಾಗಿ ಮಾತನಾಡಿ, ಕೃಷಿ ಅರಣ್ಯ ನೀತಿ ಪ್ರೋತ್ಸಾಹಿಸುವ ದೃಷ್ಟಿಯಿಂದ ಉಚಿತವಾಗಿ ಸಸಿ ಒದಗಿಸಲಾಗುತ್ತಿದೆ. ಸಮಗ್ರ ಕೃಷಿ ಅರಣ್ಯ ನೀತಿ ಜಾರಿಗೆ ಶ್ರಮಿಸುವ ಉದ್ದೇಶದಿಂದ ಕಾರ್ಯಾಗಾರ ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ನಿವೃತ್ತ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಎ.ಎಂ.ಅಣ್ಣಯ್ಯ, ಶಿವಾನಂದಮೂರ್ತಿ, ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎನ್.ಮೂರ್ತಿ, ಐಡಬ್ಲ್ಯೂಎಸ್‌ಟಿ ಸಿಲ್ವಿಕಲ್ಚರಿಸ್ಟ್ ಡಾ.ದಿವಾಕರ್, ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್.ಎಸ್.ರಾಘವೇಂದ್ರರಾವ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಬಿ. ಮೋಹನ್‌ಕುಮಾರ್, ಸಾಮಾಜಿಕ ಅರಣ್ಯ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಉಮರ್ ಬಾದ್‌ಷಾ ಎನ್ ಸೇರಿದಂತೆ ರೈತರು, ಅರಣ್ಯ ಇಲಾಖೆ ಸಿಬ್ಬಂದಿಗಳು ಭಾಗವಹಿಸಿದ್ದರು.

## ಪ್ರೌಢಶಾಲಾ ಶಿಕ್ಷಕರು ಶೈಕ್ಷಣಿಕ ಚಟುವಟಿಕೆ ಬಹಿಷ್ಕರಿಸಿ ಮುಷ್ಕರಕ್ಕೆ ಬೆಂಬಲಿಸಲು ಮನವಿ

ದಾವಣಗೆರೆ, ಫೆ.28- ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ಮಧ್ಯಂತರ ವರದಿ ಪಡೆದು ಶೇ.40 ವೇತನ ಹೆಚ್ಚಳ, ಹಳೆ ಪಿಂಚಣಿ ಯೋಜನೆ ಜಾರಿಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ, ರಾಜ್ಯ ಸರ್ಕಾರಿ ನೌಕರರ ಸಂಘದ ಕರೆಯ ಮೇರೆಗೆ ಮಾರ್ಚ್ 1ರಿಂದ ರಾಜ್ಯವ್ಯಾಪಿ ಹಮ್ಮಿಕೊಂಡಿರುವ ರಾಜ್ಯ ಸರ್ಕಾರಿ ನೌಕರರ ಮುಷ್ಕರಕ್ಕೆ ಜಿಲ್ಲೆಯ ಎಲ್ಲಾ ಪ್ರೌಢಶಾಲೆಯ ಶಿಕ್ಷಕರುಗಳು ಎಲ್ಲಾ ರೀತಿಯ ಶೈಕ್ಷಣಿಕ ಚಟುವಟಿಕೆಗಳು, ಪರೀಕ್ಷೆ ಮೌಲ್ಯಮಾಪನ ಕಾರ್ಯಗಳನ್ನು ಬಹಿಷ್ಕರಿಸಿ ಕರ್ತವ್ಯಕ್ಕೆ ಗೈರು ಹಾಜರಾಗುವ ಮೂಲಕ ಯಶಸ್ವಿಗೊಳಿಸಬೇಕೆಂದು ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘದ ಜಿಲ್ಲಾ ಘಟಕ ಕರೆ ನೀಡಿದೆ.

# ಸರ್ಕಾರದಿಂದ ತ್ವರಿತ ಯೋಜನೆ ಅನುಷ್ಠಾನ

**(1ನೇ ಪುಟದಿಂದ)** ತಯಾರಿ ನಡೆಸಿದೆ. ಇದೇ ಕಾರಣಕ್ಕಾಗಿ ಪ್ರಧಾನಿ ನರೇಂದ್ರ ಮೋದಿಯವರು ವೇಳಾಪಟ್ಟಿ ಪ್ರಕಟವಾಗುವ ಮುನ್ನವೇ ನಾಲ್ಕು ಬಾರಿ ರಾಜ್ಯದಲ್ಲಿ ಪ್ರವಾಸ ಕೈಗೊಂಡು ಬಿಜೆಪಿ ಸರ್ಕಾರದ ಕಾರ್ಯಕ್ರಮಗಳ ಅನುಷ್ಠಾನದ ಜತೆಗೆ ಪಕ್ಷದ ಬೃಹತ್ ಸಮಾವೇಶಗಳನ್ನು ಉದ್ದೇಶಿಸಿ ಪಕ್ಷದ ಪರವಾಗಿ ಅಲೆ ಎಬ್ಬಿಸಲು ತೀರ್ಮಾನಿಸಿದ್ದಾರೆ.

ಪದೇ ಪದೇ ರಾಜ್ಯ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿಯವರು ಹಲವಾರು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಷಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಸೇರಿದಂತೆ ಹಲವು ನಾಯಕರು ರಾಜ್ಯದಲ್ಲಿ ಪ್ರವಾಸ ಆರಂಭಿಸಿದ್ದಾರೆ.

ಸರ್ಕಾರದ ಸೂಚನೆಯ ಮೇರೆಗೆ ಬಿಜೆಪಿಯ ಸಚಿವರು ಮತ್ತು ಶಾಸಕರು ರಾಜ್ಯ ಕೇಂದ್ರೀತ ಕಾರ್ಯಕ್ರಮಗಳಿಗಿಂತ ತಮ್ಮ ತಮ್ಮ ಕ್ಷೇತ್ರದ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ ಮತದಾರರ ಮನ ಸೆಳೆಯುವ ಯತ್ನ ಆರಂಭಿಸಿದ್ದಾರೆ.

ಈ ಮಧ್ಯೆ ಆಡಳಿತಾರೂಢ ಬಿಜೆಪಿ ಮಾತ್ರವಲ್ಲದೆ, ಪ್ರತಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಕೂಡಾ ರಾಜ್ಯ ಪ್ರವಾಸದ ಮೇಲೆ ತಮ್ಮ ಗಮನ ನೆಟ್ಟಿವೆ.

# ಕರ್ತವ್ಯಕ್ಕೆ ಗೈರು ಹಾಜರಾಗುವುದರ ಮೂಲಕ ನೌಕರರ ಮುಷ್ಕರ



ಮಲೇಬೆನ್ನೂರು, ಫೆ. 28 - ಕರ್ನಾಟಕ ರಾಜ್ಯ ಸರ್ಕಾರಿ ನೌಕರರು ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮಾರ್ಚ್ 1 ರಿಂದ ಸರ್ಕಾರಿ ಕಚೇರಿಗಳಿಗೆ ಶಾಲಾ-ಕಾಲೇಜುಗಳಿಗೆ ಗೈರು ಹಾಜರಾಗುವುದರ ಮೂಲಕ ಅನಿರ್ದಿಷ್ಟ ಅವಧಿ ಮುಷ್ಕರವನ್ನು ಮಾಡೋಣವೆಂದು ಸರ್ಕಾರಿ ನೌಕರರ ಸಂಘದ ಹರಿಹರ ತಾ, ಅಧ್ಯಕ್ಷ ಎ ಕೆ ಭೂಮೇಶ್ ಕರೆ ನೀಡಿದರು.

**ಮಲೇಬೆನ್ನೂರು**

ಅವರು ಸೋಮವಾರ ಪಟ್ಟಣದ ಸರ್ಕಾರಿ ಶಾಲಾ-ಕಾಲೇಜುಗಳಿಗೆ ನೌಕರರ ಸಂಘದ ಪದಾಧಿಕಾರಿಗಳೊಂದಿಗೆ ಭೇಟಿ ನೀಡಿ ಎಲ್ಲಾ ನೌಕರರು ಮಾರ್ಚ್ 1 ರಿಂದ ಕರ್ತವ್ಯಕ್ಕೆ ಗೈರು ಹಾಜರಾಗುವುದರ ಮೂಲಕ ನಮ್ಮ ಒಗ್ಗಟ್ಟನ್ನು ಪ್ರದರ್ಶಿಸೋಣ ನಮ್ಮ ಭವಿಷ್ಯದ ಬದುಕಿಗಾಗಿ ಕರ್ತವ್ಯಕ್ಕೆ ಗೈರು ಹಾಜರಾಗೋಣ ಎಂದು ತಿಳಿಸಿದರು.

ನೌಕರರ ಸಂಘದ ಗೌರವಾಧ್ಯಕ್ಷ ವಿಜಯ ಮಹಾಂತೇಶ್, ಕಾರ್ಯದರ್ಶಿ ಎಂ.ಬಿ. ಮಂಜುನಾಥ್, ಉಪಾಧ್ಯಕ್ಷರಾದ ವೈ.ಪಿ. ಸಾಕಮ್ಮ, ಸಾಂಸ್ಕೃತಿಕ ಕಾರ್ಯದರ್ಶಿ ಬಿ.ಹೆಚ್. ಶಿವಕುಮಾರ್, ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಸಿ. ಜಯಣ್ಣ, ಉಪ ಪ್ರಾಂಶುಪಾಲ ಜಗದೀಶ್ ಉಜ್ಜಮ್ಮನವರ್, ಶಿಕ್ಷಕರಾದ ರೇವಣಸಿದ್ದಪ್ಪ ಅಂಗಡಿ, ರಾಮಪ್ಪ ಸೋಮಣ್ಣನವರ್, ಮುಂತಾದವರಿದ್ದರು.

# ಇಂದಿನ ಸರ್ಕಾರಿ ನೌಕರರ ಮುಷ್ಕರಕ್ಕೆ ನಗರ ಪಾಲಿಕೆ ನೌಕರರ ಬೆಂಬಲ



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಿ ಇಂದಿನಿಂದ ನಡೆಸಲುದ್ದೇಶಿಸಿರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ದಾವಣಗೆರೆ ಮಹಾನಗರ ಪಾಲಿಕೆ ನೌಕರರ ಸಂಘವು ಸಂಪೂರ್ಣ ನೈತಿಕ ಬೆಂಬಲ ನೀಡಿದೆ ಎಂದು ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್ ತಿಳಿಸಿದ್ದಾರೆ.

ಕೆಲಸಕ್ಕೆ ಗೈರು ಹಾಜರಾಗುವ ಮೂಲಕ ಈ ಮುಷ್ಕರ ಹಮ್ಮಿಕೊಂಡಿದ್ದು, ಸದರಿ ಮುಷ್ಕರಕ್ಕೆ ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಸಂಘದ ವತಿಯಿಂದ ನೈತಿಕ ಬೆಂಬಲ ವ್ಯಕ್ತಪಡಿಸಿದೆ.

ಬೇಡಿಕೆಗಳನ್ನು ಈಡೇರಿಸದಿದ್ದರೆ ಪಾಲಿಕೆ ಅಧಿಕಾರಿ ಹಾಗೂ ನೌಕರರು ಸಹ ಸ್ವಚ್ಛತೆ ಮತ್ತು ನೀರು ಸರಬರಾಜು ಒಳಗೊಂಡಂತೆ ಕಚೇರಿಯ ಎಲ್ಲಾ ಕೆಲಸಗಳನ್ನು ನಿಲ್ಲಿಸಿ, ಗೈರು ಹಾಜರಾಗುವ ಮೂಲಕ ಮುಷ್ಕರಕ್ಕೆ ಬೆಂಬಲ ನೀಡವುದಾಗಿ ಗೋವಿಂದರಾಜ್ ಎಚ್ಚರಿಸಿದ್ದಾರೆ.

# ಅತಿ ಹೆಚ್ಚಿನ ತಾಪಮಾನ ದಾಖಲು

**(1ನೇ ಪುಟದಿಂದ)** ಎಂದಿದ್ದಾರೆ. ಇಡೀ ಪ್ರಪಂಚ ಈಗ ತಾಪಮಾನ ಹೆಚ್ಚಳದ ಕಾಲದಲ್ಲಿದೆ. ನಾವೀಗ ಬಿಸಿ ಕಾಲದಲ್ಲಿದ್ದೇವೆ ಎಂದು ಭಾನ್ ಹೇಳಿದ್ದಾರೆ. ಫೆಬ್ರವರಿ ತಿಂಗಳಲ್ಲಿ ಕನಿಷ್ಠ ತಾಪಮಾನ 1901ರ ನಂತರ ಐದನೇ ಅತಿ ಹೆಚ್ಚಿನ ಹಂತದಲ್ಲಿದೆ.

ಮಾರ್ಚ್ ತಿಂಗಳಲ್ಲಿ ದೇಶಾದ್ಯಂತ ಮಳೆಯ ಪ್ರಮಾಣ ವಾಡಿಕೆಯಷ್ಟಿರಲಿದೆ. ಮಾರ್ಚ್ ತಿಂಗಳಲ್ಲಿ ದೀರ್ಘಾವಧಿ ವಾಡಿಕೆ ಮಳೆ ಪ್ರಮಾಣ 29.9 ಮಿ.ಮೀ. ಆಗಿದೆ.

# ತಲೆಗೆ ಕಟ್ಟಿಗೆಯಿಂದ ಹೊಡೆದು ಕೊಲೆ

ದಾವಣಗೆರೆ, ಫೆ. 28- ಹಳೇ ವೈಷಮ್ಯದಿಂದ ವ್ಯಕ್ತಿಯೋರ್ವನಿಗೆ ಕಟ್ಟಿಗೆಯಿಂದ ಹೊಡೆದು ಭೀಕರವಾಗಿ ಕೊಲೆ ಮಾಡಿದ ಘಟನೆ ಇಲ್ಲಿನ ಕಬ್ಬೂರು ಬಸಪ್ಪ ನಗರದಲ್ಲಿ ನಡೆದಿದೆ.

ಕಬ್ಬೂರು ಬಸಪ್ಪ ನಗರದ ಪ್ರಶಾಂತ್ (29) ಕೊಲೆಯಾದ ಯುವಕ. ತಲೆಗೆ ಬಲವಾದ ಏಟು ಬಿದ್ದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದು, ಕಬ್ಬೂರು ಬಸಪ್ಪ ನಗರದ ಯಲವಟ್ಟಿ ರೈಸ್‌ಮಿಲ್ ಬಳಿ ಶವ ಪತ್ತೆಯಾಗಿದೆ. ಕೊಲೆಗೆ ಹಳೆಯ ವೈಷಮ್ಯವೇ ಕಾರಣ ಎನ್ನಲಾಗಿದೆ.

ಘಟನಾ ಸ್ಥಳಕ್ಕೆ ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಆರ್.ಎಂ.ಸಿ. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಾತೃಭಾಷೆಯಿಂದಲೇ ಪ್ರಗತಿ ಪಥ

**(1ನೇ ಪುಟದಿಂದ)**

ಚಟುವಟಿಕೆಗಳಿಗೆ ಉತ್ತೇಜನ ನೀಡಲು ಜಿಮ್‌ಖಾನಾ ಆರಭಿಸಲಾಗಿದೆ. ರಾಷ್ಟ್ರೀಯ ಉಚ್ಚತರ ಶಿಕ್ಷಣ ಅಭಿಯಾನದಡಿ ಕೇಂದ್ರ ಸರ್ಕಾರದಿಂದ 20 ಕೋಟಿ ರೂ. ಬಿಡುಗಡೆಯಾಗಿದೆ ಎಂದರು. ಎಐಸಿಟಿಇ ಅಧ್ಯಕ್ಷ ಪ್ರೊ. ಟಿ. ಜಿ. ಸೀತಾರಾಮ್ ಘಟಿಕೋತ್ಸವ ಭಾಷಣ ಮಾಡಿದರು.

ಕುಲಸಚಿವೆ ಬಿ.ಬಿ.ಸರೋಜ, ಪರೀಕ್ಷಾಂಗ ಕುಲಸಚಿವ ಡಾ.ಕೆ. ಶಿವಶಂಕರ, ಡೀನ್‌ರಾದ ಪ್ರೊ. ರಾಮಲಿಂಗಪ್ಪ, ಪ್ರೊ.ವೆಂಕಟರಾವ್ ಪಲಾಟಿ, ಪ್ರೊ. ಜೆ.ಕೆ.ರಾಜು ಮತ್ತು ಡಾ.ಕೆ.ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು. ಡಾ.ಭೀಮಾಶಂಕರ ಜೋಶಿ ಮತ್ತು ಡಾ.ಮಾನಸ ಕಾರ್ಯಕ್ರಮ ನಿರೂಪಿಸಿದರು.

## ಅವಸರದಲ್ಲಿ ಓಡಿದ ಕಾರ್ಯಕ್ರಮ

ಘಟಿಕೋತ್ಸವದ ಕಾರ್ಯಕ್ರಮಗಳು ಅವಸರದಲ್ಲಿ ನಡೆದಿದ್ದು ಕಂಡು ಬಂತು. ಪದಕ ವಿಜೇತರಿಗೆ ಗಡಿಬಿಡಿಯಲ್ಲಿ ಪದಕ ಪ್ರದಾನ ಮಾಡಲಾಯಿತು.

ಗೌರವ ಡಾಕ್ಟರೇಟ್ ನೀಡುವಾಗಲೂ ಆತುರ ಕಂಡು ಬಂತು. ಎಐಸಿಟಿಇ ಅಧ್ಯಕ್ಷ ಪ್ರೊ. ಟಿ.ಜಿ. ಸೀತಾರಾಮ್ ಅವರ ಘಟಿಕೋತ್ಸವ ಭಾಷಣವಂತೂ ಅತಿ ಕಡಿಮೆ ಅವಧಿಯದ್ದಾಗಿತ್ತು. ಲಿಖಿತ ಭಾಷಣ ಕೇವಲ ನಾಲ್ಕು ಪುಟಗಳಷ್ಟಿತ್ತು.


ರಾಜ್ಯಪಾಲರ ತಾವರ್‌ಚಂದ್ ಗೆಹ್ಲೋಟ್ ಅವರು ಮಾತ್ರ ಸುದೀರ್ಘವಾಗಿ ಶಿಕ್ಷಣ ವಲಯದ ವಿಷಯಗಳ ಮೇಲೆ ಬೆಳಕು ಚೆಲ್ಲಿದರು.

ಬೆಳಿಗ್ಗೆ 10.15ರ ಸಮಯದಲ್ಲಿ ಆರಂಭವಾದ ಕಾರ್ಯಕ್ರಮ, 11.30ರ ವೇಳೆ ಮುಕ್ತಾಯವಾಯಿತು.

## ತಾರೇಹಳ್ಳಿಯಲ್ಲಿ ಇಂದು ರಂಗನಾಥಸ್ವಾಮಿ ರಥೋತ್ಸವ

ಜಗಳೂರು ತಾಲ್ಲೂಕಿನ ತಾರೇಹಳ್ಳಿಯ ಶ್ರೀ ರಂಗನಾಥ ಹಿರಿಯ ಧಾರ್ಮಿಕ ದತ್ತಿ ದೇವಸ್ಥಾನದ ಶ್ರೀ ರಂಗನಾಥ ಸ್ವಾಮಿ ರಥೋತ್ಸವವು ಇಂದು ಸಂಜೆ 7ಕ್ಕೆ ನೆರವೇರಲಿದೆ. ನಾಳೆ ಗುರುವಾರ ಜಾತ್ರಾ ಕಾರ್ಯಕ್ರಮ, ನಾಡಿದ್ದು ಶುಕ್ರವಾರ ಓಕಳಿ ಉತ್ಸವ ಕಾರ್ಯಕ್ರಮಗಳು ನಡೆಯಲಿವೆ.

## ಮಲೇಬೆನ್ನೂರಿನಲ್ಲಿಂದು ಗಂಧ, ನಾಳೆ ಉರುಸ್



ಸೌಹಾರ್ದತೆ ಸಾರುವ ಮಲೇಬೆನ್ನೂರಿನ ಪ್ರಸಿದ್ಧ ಹಜರತ್ ಸೈಯದ್ ಹಬೀಬುಲ್ಲಾ ಷಾ ಖಾದ್ರಿ ಅವರ ಗಂಧ, ಉರುಸು ಇಂದು ಮತ್ತು ನಾಳೆ ಗುರುವಾರ ಜರುಗಲಿದೆ. ಗುರುವಾರ ರಾತ್ರಿ 9 ಕ್ಕೆ ದರ್ಗಾ ಆವರಣದಲ್ಲಿ ಪ್ರಸಿದ್ಧ ಖಾವ್ವಲರಿಂದ ಖವ್ವಾಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಉರುಸ್ ಕಮಿಟಿ ಅಧ್ಯಕ್ಷ ಖುರ್ಬಾನ್ ಅಲಿ ತಿಳಿಸಿದ್ದಾರೆ.

## ಹಂಪನೂರಿನಲ್ಲಿ ಇಂದು ಬಸವನ ಉತ್ಸವ

ಚಿತ್ರದುರ್ಗ ತಾಲ್ಲೂಕು ಹಂಪನೂರಿನಲ್ಲಿ ನಡೆಯುತ್ತಿರುವ ಶ್ರೀ ರಂಗನಾಥಸ್ವಾಮಿ ನೂತನ ರಥೋತ್ಸವ ಹಾಗೂ ಶ್ರೀ ರಾಮೇಶ್ವರ ಸ್ವಾಮಿ ನೂತನ ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 10 ಕ್ಕೆ ಶ್ರೀ ರಾಮೇಶ್ವರ ಸ್ವಾಮಿಯ ಬಸವನ ಉತ್ಸವ ನಡೆಯಲಿದೆ. ನಾಳೆ ಗುರುವಾರ ಬೆಳಿಗ್ಗೆ 10 ಗಂಟೆಗೆ ಶ್ರೀ ರಂಗನಾಥಸ್ವಾಮಿಯ ಆನೆ ಉತ್ಸವ ನಡೆಯಲಿದೆ.

# ಸರ್ಕಾರಿ ನೌಕರರ ಮುಷ್ಕರ ಶುರು

**(1ನೇ ಪುಟದಿಂದ)** ಸಮಯವಕಾಶ ಬೇಕು. ತಮ್ಮ ನಿರ್ಧಾರದಿಂದ ಹಿಂದೆ ಸರಿಯುವಂತೆ ಮನವಿ ಮಾಡಿದ್ದರು. ನೌಕರರು ತಮ್ಮ ನಿಲುವಿನಿಂದ ಒಂದಿಂಚು ಹೊರಬರದ ಕಾರಣ ಮಾತುಕತೆ ವಿಫಲಗೊಂಡು ನಾಳೆಯಿಂದ ಸರ್ಕಾರಿ ಸೇವೆ ಬಂದ್ ಆಗಲಿದೆ. 5.11 ಲಕ್ಷ ನೌಕರರು ಕರ್ತವ್ಯಕ್ಕೆ ಗೈರು ಹಾಜರಾಗುವ ಮೂಲಕ ಅನಿರ್ದಿಷ್ಟ ಅವಧಿ ಮುಷ್ಕರ ನಡೆಯಲಿದೆ.

ಶಾಲಾ ಕಾಲೇಜು, ತ್ಯಾಜ್ಯ ವಿಲೇವಾರಿ, ಕಂದಾಯ ಮತ್ತು ಆರೋಗ್ಯ ಸೇವೆ ಸೇರಿದಂತೆ ಎಲ್ಲವೂ ಸ್ಥಗಿತಗೊಳ್ಳಲಿದೆ. ಈ ಮುಷ್ಕರಕ್ಕೆ ಗ್ರಾಮ ಪಂಚಾಯಿತಿ ಸಿಬ್ಬಂದಿ ನಗರ ಸ್ಥಳೀಯ ಸಂಸ್ಥೆಗಳು, ಮಹಾನಗರ ಪಾಲಿಕೆಯ ಖಾಯಂ ಪೌರಕಾರ್ಮಿಕರು, ಈ ಮುಷ್ಕರದಲ್ಲಿ ಪಾಲ್ಗೊಳ್ಳಲಿದ್ದಾರೆ. ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆಗಷ್ಟೇ ಅವಕಾಶವಿರುತ್ತದೆ. ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಬರುವ ತಹಶೀಲ್ದಾರ್ ಹಾಗೂ ನೋಂದಣಿ ಕಚೇರಿಗಳು ಬಂದ್ ಆಗಲಿವೆ. ಈ ಮಧ್ಯೆ ರಾಜ್ಯ ಸರ್ಕಾರಿ ನೌಕರರ ಏಳನೇ ವೇತನ ಆಯೋಗದ ಶಿಫಾರಸ್ಸುಗಳನ್ನು ನಮ್ಮ ಸರ್ಕಾರ ಬಂದರೆ ಜಾರಿಗೊಳಿಸುವುದಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

## ಮಧ್ಯಂತರ ವರದಿ ಪಡೆದು ಜಾರಿ : ಸಿಎಂ

**(1ನೇ ಪುಟದಿಂದ)** ಆಯೋಗದ ಜಾರಿಗೆ ತರುವುದಾಗಿ ಮತ್ತೊಮ್ಮೆ ಪುನರುಚ್ಚರಿಸಿದ್ದು, ನಡೆಯುವ ಸರ್ಕಾರಿ ನೌಕರರ ಪ್ರತಿಭಟನೆ ತಡೆಯಲು ಮುಂದಾಗಿದ್ದಾರೆ. ಸರ್ಕಾರಿ ನೌಕರರು 7ನೇ ವೇತನ ಆಯೋಗದ ಮಧ್ಯಂತರ ವರದಿ ಪಡೆದು ಅದನ್ನು ಪರಿಷ್ಕರಣೆ ಮಾಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಸರ್ಕಾರಿ ನೌಕರರ ಒತ್ತಾಯವನ್ನು ನಮ್ಮ ಸರ್ಕಾರ ಒಪ್ಪಿದೆ. ಈ ಕೂಡಲೇ ನಾವು ಆಯೋಗ ಮಧ್ಯಂತರ ವರದಿ ಪಡೆದು ಅದರ ಅನುಷ್ಠಾನಕ್ಕೆ ಸಿದ್ಧರಿದ್ದೇವೆ ಎಂದು ಭರವಸೆಯ ಮಾತುಗಳನ್ನಾಡಿದರು.

ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ದಾವಣಗೆರೆ.
ಸ್ಥಳಾಂತರ
ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು ಈಗಿರುವ ವಿಳಾಸದ ಹಿಂದಿನ ಹದಡಿ ರಸ್ತೆಯ ಮೂರ್ತಪ್ಪ ಪ್ಲಾಜಾ, ಮೊದಲನೇ ಮಹಡಿಗೆ ಸ್ಥಳಾಂತರಿಸಲಾಗಿದೆ. ಸೊಸೈಟಿಯ ಸದಸ್ಯರು ಹಾಗೂ ಗ್ರಾಹಕರು ಸಹಕರಿಸಲು ಕೋರಿದೆ.
- ಎನ್. ರಂಗಸ್ವಾಮಿ, ವಕೀಲರು, ಅಧ್ಯಕ್ಷರು






# ಅಭಿನಂದನೆಗಳು



**ಪ್ರಸನ್ನ ಕುಮಾರ್ ಎ.ಎನ್.**
2022ರ ಎಂ.ಇಡಿ ಸ್ನಾತಕೋತ್ತರ ವಿಭಾಗದಿಂದ ದಾವಣಗೆರೆ ವಿಶ್ವವಿದ್ಯಾಲಯದಿಂದ 2ನೇ ರ್‍ಯಾಂಕ್ ಪಡೆದು ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವದ ಸಮಾರಂಭದಲ್ಲಿ ಮಾನ್ಯ ಗೌರವಾನ್ವಿತ ಉಪಕುಲಪತಿಗಳಿಂದ ಪ್ರಮಾಣಪತ್ರ ಮತ್ತು ಪದಕ ಸ್ವೀಕರಿಸಿದ್ದಾರೆ.

**ಪ್ರಸನ್ನ ಕುಮಾರ್ ಎ.ಎನ್.**
ಜಂಟಿ ಕಾರ್ಯದರ್ಶಿಗಳು
ಶ್ರೀ ಕೇಸರಿ ವಿದ್ಯಾಸಂಸ್ಥೆ,
ಅತ್ತಿಗೆರೆ, ದಾವಣಗೆರೆ ತಾ.

ಶ್ರೀಯುತರು ದಾವಣಗೆರೆ ಜಿಲ್ಲೆಯ ಕೇಸರಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿಗಳಾದ ಎ.ಜಿ. ನಾಗಪ್ಪನವರ ಸುಪುತ್ರರು

ಇವರಿಗೆ ಕೇಸರಿ ವಿದ್ಯಾಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಸರ್ವ ನಿರ್ದೇಶಕರು ಮತ್ತು ಶಾಲೆಯ ಬೋಧಕ, ಬೋಧಕೇತರ ವರ್ಗದವರು ಹಾಗೂ ಪೋಷಕರು ಮತ್ತು ಮಕ್ಕಳು ಅತ್ತಿಗೆರೆ ಗ್ರಾಮಸ್ಥರು ಇವರನ್ನು ಅಭಿನಂದಿಸಿದ್ದಾರೆ

# ತೃತೀಯ ವರ್ಷದ ಪುಣ್ಯಸ್ಮರಣೆ



ಜನನ : 17.7.1977
ಮರಣ : 01.03.2020


**ಶ್ರೀಮತಿ ವಿನೋದ ಎಸ್. ಶಿರಗಂಬಿಯವರು**
ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನಿಟ್ಟುವಳ್ಳಿ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಶ್ರೀಮತಿ ಗೌರಮ್ಮ, ಶ್ರೀ ಎಸ್.ಆರ್ ಶಿರಗಂಬಿ, ನಿ. ಮುಖ್ಯೋಪಾಧ್ಯಾಯರು ಮತ್ತು ಮಕ್ಕಳು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ತರಳಬಾಳು ಬಡಾವಣೆ, ದಾವಣಗೆರೆ.

# ಬಾತಿ ಭರಮಜ್ಜರ ನಾಗರಾಜಪ್ಪನವರ ಪುತ್ರ ಎನ್.ಎಸ್. ಪಾಟೀಲ್ ಇವರಿಗೆ ಅಭಿನಂದನೆಗಳು





ದಾವಣಗೆರೆ ಬಿ.ಐ.ಇ.ಟಿ ಎಂಜಿನಿಯರಿಂಗ್ ಕಾಲೇಜ್ ನ ಇನ್ಫಾರ್ಮೇಷನ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದು

**ಶ್ರೀಯುತ ಎನ್.ಎಸ್. ಪಾಟೀಲ್ ರವರು**
ಬಿಐಇಟಿ ಕಾಲೇಜಿನ ಐಎಸ್ ವಿಭಾಗ ಮುಖ್ಯಸ್ಥರಾದ ಪ್ರೊಫೆಸರ್ ಡಾ॥ ಪೂರ್ಣಿಮಾ ಬಿ. ಇವರ ಮಾರ್ಗದರ್ಶನದಲ್ಲಿ ಸಲ್ಲಿಸಿರುವ
``Effective Techniques for Managing Large and Unstructured Graph Database''
ಎಂಬ ಪ್ರಬಂಧಕ್ಕಾಗಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ **ಡಾಕ್ಟರೇಟ್' ಪದವಿಗೆ ಭಾಜನರಾಗಿರುವ ಇವರಿಗೆ**

**ಶುಭಕೋರುವವರು :**
- ಬಾತಿ ರೇವಣಸಿದ್ದಪ್ಪ, ಇಂಜಿನಿಯರ್ ಮತ್ತು ಕುಟುಂಬ
- ಪ್ರೊ. ಬಾತಿ ಬಸವರಾಜ್ ಮತ್ತು ಕುಟುಂಬ
- ಶ್ರೀಮತಿ ಪ್ರಮೀಳಮ್ಮ, ಕೆ.ಜಿ. ಬಸವರಾಜಪ್ಪ ಮತ್ತು ಕುಟುಂಬ
- ಶ್ರೀಮತಿ ಸುಶೀಲಮ್ಮ, ಕೆ.ಜಿ. ಮರುಳಸಿದ್ದಪ್ಪ ಮತ್ತು ಕುಟುಂಬ
- ಶ್ರೀಮತಿ ಪಾರ್ವತಮ್ಮ, ಕೆ.ಜಿ. ಜಯಪ್ಪ ಮತ್ತು ಕುಟುಂಬ
- ಶ್ರೀಮತಿ ಮಮತ ಕೆ.ಜಿ. ಉಮೇಶ್ ಮತ್ತು ಕುಟುಂಬ
- ಟಿ. ನಾಗಪ್ಪ ಮತ್ತು ಕುಟುಂಬ
- ಶ್ರೀ ಕೆ.ಜಿ. ಸಿದ್ದಲಿಂಗಪ್ಪ ಮತ್ತು ಕುಟುಂಬ
- ಶ್ರೀಮತಿ ಸರೋಜಮ್ಮ, ಕೆ.ಜಿ. ರೇವಣಸಿದ್ದಪ್ಪ ಮತ್ತು ಕುಟುಂಬ
- ಶ್ರೀಮತಿ ರತ್ನಮ್ಮ ಮುರುಗೇಂದ್ರಪ್ಪ ಮತ್ತು ಕುಟುಂಬ
- ಶ್ರೀಮತಿ ಹೇಮಲತಾ, ಬಿ.ಹೆಚ್. ಮಂಜಪ್ಪ ಮತ್ತು ಕುಟುಂಬ
- ಶ್ರೀಮತಿ ಸಾವಿತ್ರ, ಸಿ. ಬಸವರಾಜ್, ನಿ. ಕಾ. ಇಂಜಿನಿಯರ್ ಮತ್ತು ಕುಟುಂಬ
- ಶ್ರೀಮತಿ ಸುಮಾ, ಬಿ.ಎಂ. ಹರ್ಷ ಮತ್ತು ಕುಟುಂಬ


ಇಂದಿನಿಂದ ಶುಭಾರಂಭ ಸದರ್ನ್ ಸ್ಟಾರ್, ದಾವಣಗೆರೆ
ದಾವಣಗೆರೆ ನಾಗರಿಕರಿಗೆ ನಂಬಲಸಾಧ್ಯವಾದ ಮಾರಾಟ

**BRANDED READYMADE GARMENTS BIGGEST EVER DISCOUNT SALE**
Like Ladies, Gents & Kids and Bed Sheets
"For Direct Retail Customers"
**Up to 80% Heavy Disscount**

ಸೂಚನೆ: ಬ್ರಾಡೆಂಡ್ ರೆಡಿಮೇಡ್ ಉಡುಪುಗಳ ಬೃಹತ್ ಸ್ಟಾಕ್‌ನಿಂದಾಗಿ ಗೋದಾಮಿನಲ್ಲಿ ಸಂಗ್ರಹವಾಯಿತು. ಇದು ಕಂಪನಿಯು ಆರ್ಥಿಕ ಬಿಕ್ಕಟ್ಟಿನ ಕಡೆಗೆ ಎದುರಿಸಿತು, ಆದ್ದರಿಂದ ಕಂಪನಿಯು ದಾವಣಗೆರೆ ಗ್ರಾಹಕರಿಗೆ ಭಾರಿ ರಿಯಾಯಿತಿ ನೀಡಲು ನಿರ್ಧರಿಸಿದೆ 3 ಕೋಟಿ ರೂಪಾಯಿಗಳ ರೆಡಿಮೇಡ್ ಉಡುಪುಗಳನ್ನು ಈಗ ಕೇವಲ 60 ಲಕ್ಷಕ್ಕೆ ನಗದು ರೂಪದಲ್ಲಿ ಮಾರಾಟ ಮಾಡಲು ನಿರ್ಧರಿಸಿದೆ ಮತ್ತು 3 ದಿನಗಳಲ್ಲಿ ಬಾಕಿ ಸರಕನ್ನು ಮಾರಾಟ ಮಾಡಲಾಗುವುದು.

ಸದರ್ನ್ ಸ್ಟಾರ್, ದಾವಣಗೆರೆ
Sincere Request : To the customers to maintain silence during shopping

10,000 ವಿವಿಧ ಪ್ರಕಾರದ ಜೇಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಟೀ ಶರ್ಟ್, ಲೋವರ್, ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೊ, ಇತರೆ
Just Rs.150/- to 350/-

ಬಿಗ್ ಬ್ರಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್: MRP: 1499/- to 4999/-
INDIAN TERRAIN, INDIGO NATION, DANIEL HECHTER, BARE, IZOD, HIGHLANDER, SCULLERS
Choose 30,000 Verities Jeans Pant, Cotton Pant, Formal, Shirts, T-Shirts, Lower Etc.
Just Rs. 499/- to 999/-

ಬ್ರಾಂಡೆಡ್ ಲೇಡಿಸ್ ಕುರ್ತಿಸ್ ಮೇಳಾ, ಕುರ್ತಿ ಮತ್ತು ಪಾಶ್ಚಿಮಾತ್ಯ ಬಟ್ಟೆಗಳು MRP : Up to 3999/-
BIBA, JACK & JONES, VERO MODA, abof, ONLY
Choose 20,000 Plazo, Pant, Kurti & Western Outfits ectc
Just Rs. 200/-, 400/-, 600/-
*This offer till stock lasts
*Condition apply

BIG Offer Rajasthani Royal Printed Bedsheets, Pillow cover, Sofa cover etc
Ladies & Gents Under Garments Just Rs. 60/- to 125/-
ಆಫರ್ 3 ದಿನಗಳು ಮಾತ್ರ 1 ಬುಧ, 2 ಗುರು, & 3 ಶುಕ್ರ ಮಾರ್ಚ್ 2023 Time : 10am to 10pm

ಸ್ಥಳ: SOUTHERN STAR ಸದರ್ನ್ ಸ್ಟಾರ್
3993/23, Shamanur Road, S.S. Layout, A Block, Kuvempunagar, Davanagere, Karnataka-577004
3993/23, ಶ್ಯಾಮನೂರ ರಸ್ತೆ, ಎಸ್ಎಸ್ ಲೇಔಟ್ ಎ.ಬ್ಲಾಕ್, ಕುವೆಂಪುನಗರ, ದಾವಣಗೆರೆ-577004
FREE PARKING ENTRANCE
All Major Debit / Credit Cards. Google Pay, PhonePe Accepted





ಎಸ್.ಎಸ್. ಮಲ್ಲಿಕಾರ್ಜುನ್ ಅಭಿಮಾನಿಗಳ ಬಳಗ ಹಾಗೂ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಮತ್ತು ಹಿತೈಷಿಗಳು, ಶಾಮನೂರು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte